14 September 2026 Monday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 270 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಜೀವನದಲ್ಲಿ ಯಾವುದೂ ಶಾಶ್ವತವಲ್ಲ ಎಂದು ತಿಳಿದು ನಡೆದರೆ ಮಾತ್ರ, ಸ್ವಾರ್ಥ, ಕೆಟ್ಟತನದ ಹಾದಿಯಲ್ಲಿ ಹೆಜ್ಜೆ ಹಾಕುವದಿಲ್ಲ!

-ಸ್ನೇಹಾ ಆನಂದ್

**ಶುಭಾಶಯಗಳು**

ವರ್ತಮಾನ ಪ್ರಾದೇಶಿಕ ದಿನಪತ್ರಿಕೆಯ ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ ಗೌರಿ –ಗಣೇಶ ಹಬ್ಬದ ಶುಭಾಶಯಗಳು

**ಬಿಡುವು**

ಗೌರಿ –ಗಣೇಶ ನಿಮಿತ್ತ ಸೋಮವಾರ ಕಚೇರಿಗೆ ರಜೆ ಇರುವುದರಿಂದ ಮಂಗಳವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

## ಬ್ರಿಕ್ಸ್ 2026: ಪಾಕ್‌ಗೆ ಎಂಟ್ರಿ ಇಲ್ಲ: ಮೂರು ವರ್ಷದಿಂದಲೂ ಗೋಳಾಟ

**ಇಸ್ಲಾಮಾಬಾದ್:** ಪ್ರಧಾನಿ ನರೇಂದ್ರ ಮೋದಿ ಆಯೋಜಿಸಿದ್ದ ವ್ಲಾಡಿಮಿರ್ ಪುಟಿನ್ ಮತ್ತು ಕ್ಸಿ ಜಿನ್‌ಪಿಂಗ್‌ರಂತಹ ಜಾಗತಿಕ ನಾಯಕರು ಬ್ರಿಕ್ಸ್ ಶೃಂಗಸಭೆಗಾಗಿ ನವದೆಹಲಿಯ ಭಾರತ್ ಮಂಟಪದಲ್ಲಿ ಒಟ್ಟುಗೂಡಿದ್ದಾರೆ. ಈ ವಿಶ್ವದ ಅತ್ಯಂತ ಪ್ರಭಾವಶಾಲಿ ಮತ್ತು ವೇಗವಾಗಿ ಹೊರಹೊಮ್ಮುತ್ತಿರುವ ಆರ್ಥಿಕ ಗುಂಪಿನ 18ನೇ ಶೃಂಗಸಭೆಯು ಪ್ರಸ್ತುತ ಭಾರತದ ರಾಜಧಾನಿಯಲ್ಲಿ ನಡೆಯುತ್ತಿದೆ.

ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇರಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನಂತಹ ದೇಶಗಳು ಭಾಗವಹಿಸುತ್ತಿವೆ. ಆದಾಗ್ಯೂ, ಈ ಭವ್ಯ ವೇದಿಕೆಯಿಂದ ಪಾಕಿಸ್ತಾನ ಕಾಣೆಯಾಗಿದೆ. ಅರ್ಜಿ ಸಲ್ಲಿಸಿ ಮೂರು ವರ್ಷಗಳ




ನಂತರವೂ ಪಾಕಿಸ್ತಾನ ಬ್ರಿಕ್ಸ್ ಶೃಂಗಸಭೆಯ ಭಾಗವಾಗಲು ಏಕೆ ಸಾಧ್ಯವಾಗಲಿಲ್ಲ? ಅದರ ಯಜಮಾನ ಚೀನಾ ಆಗಿದ್ದರೂ ಪಾಕ್ ಒಳಗೆ ಪ್ರವೇಶಿಸಲು ಸಾಧ್ಯವಾಗಲಿಲ್ಲ?

ಬ್ರಿಕ್ಸ್ ಅನ್ನು 2001ರಲ್ಲಿ ಸ್ಥಾಪಿಸಲಾಯಿತು. ಆರಂಭದಲ್ಲಿ, ಇದು ಕೇವಲ ಪರಿಕಲ್ಪನಾ ಚೌಕಟ್ಟಾಗಿತ್ತು. ಆದರೆ 2009ರಲ್ಲಿ, ಈ ದೇಶಗಳು ಔಪಚಾರಿಕವಾಗಿ ಗುಂಪನ್ನು ರಚಿಸಿದವು. ಜಾಗತಿಕ ಸಂಸ್ಥೆಗಳು ಪಾಶ್ಚಿಮಾತ್ಯ ದೇಶಗಳಿಂದ ಹೆಚ್ಚು ಪ್ರಾಬಲ್ಯ ಹೊಂದಿವೆ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಿರೀಕ್ಷೆಗಳನ್ನು ಪೂರೈಸುತ್ತಿಲ್ಲ ಎಂದು ಅವರು ನಂಬಿದ್ದರು.

2011ರಲ್ಲಿ ದಕ್ಷಿಣ ಆಫ್ರಿಕಾ ಸೇರ್ಪಡೆಯೊಂದಿಗೆ ಗುಂಪು ಬ್ರಿಕ್ಸ್ ಆಯಿತು. ತರುವಾಯ, ಸಂಸ್ಥೆ ವಿಸ್ತರಿಸುತ್ತಲೇ ಇತ್ತು. 2024 ರಲ್ಲಿ, ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ ಮತ್ತು ಯುಎಇ ಸೇರಿಕೊಂಡವು, ಆದರೆ ಇಂಡೋನೇಷ್ಯಾ ಕೂಡ 2025 ರಲ್ಲಿ ಔಪಚಾರಿಕ ಸದಸ್ಯರಾದರು. ಇಂದು, ಈ ಪ್ರಬಲ ಬಣವು ಒಟ್ಟು 11 ದೇಶಗಳನ್ನು ಒಳಗೊಂಡಿದೆ.

## ಬ್ರಿಕ್ಸ್ 2026: ತಂತ್ರಜ್ಞಾನ ಶಸ್ತ್ರಾಸ್ತ್ರೀಕರಣ ವಿರುದ್ಧ ಪ್ರಧಾನಿ ವಿರುದ್ಧ ಮೋದಿ ಎಚ್ಚರಿಕೆ!

**ನವದೆಹಲಿ:** ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು ಜಾಗತಿಕವಾಗಿ ಸಾಮಾನ್ಯ ಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು

ಈ ಸವಾಲುಗಳನ್ನು ಎದುರಿಸಲು ಮತ್ತು ವಿಶೇಷವಾಗಿ ಜಾಗತಿಕ ದಕ್ಷಿಣದಾದ್ಯಂತ ಸಮಗ್ರ ಬೆಳವಣಿಗೆಯನ್ನು ಹೆಚ್ಚಿಸಲು ಬ್ರಿಕ್ಸ್ ಒಂದಾಗಬೇಕು ಎಂದಿದ್ದಾರೆ.

ಬ್ರಿಕ್ಸ್ ಶೃಂಗಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ತಂತ್ರಜ್ಞಾನ ಮತ್ತು ನಿರ್ಣಾಯಕ ಖನಿಜಗಳ ಶಸ್ತ್ರಾಸ್ತ್ರೀಕರಣದ ಬಗ್ಗೆ ಗಂಭೀರ ಕಳವಳಗಳನ್ನು ವ್ಯಕ್ತಪಡಿಸಿದರು. ಇದು ಹಂಚಿಕೆಯ ಪ್ರಗತಿ ಮತ್ತು ಸಮೃದ್ಧಿಗೆ ಅಡ್ಡಿಯಾಗಬಹುದು ಎಂದು ಹೇಳಿದರು.

ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ರಷ್ಯಾದ




ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಮತ್ತು ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಸೇರಿದಂತೆ ಬ್ರಿಕ್ಸ್ ಗುಂಪಿನ ಉನ್ನತ ನಾಯಕರ ಸಮ್ಮುಖದಲ್ಲಿ ಮೋದಿ ಈ ಹೇಳಿಕೆಗಳನ್ನು ನೀಡಿದರು.

ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆ ಈ ನಾಲ್ಕು ಆಧಾರ ಸ್ತಂಭಗಳತ್ತ ನಾವು ಗಮನವನ್ನು ಕೇಂದ್ರೀಕರಿಸಿದ್ದೇವೆ. ನಿಮ್ಮ ಸಹಕಾರ ಮತ್ತು ಬೆಂಬಲದೊಂದಿಗೆ, ನಮ್ಮ ಹಂಚಿಕೆಯ ದೃಷ್ಟಿಕೋನವನ್ನು ಗೆಲುವು–ಗೆಲುವಿನ ಪರಿಸ್ಥಿತಿಯಾಗಿ ಪರಿವರ್ತಿಸಲು ನಮಗೆ ಸಾಧ್ಯವಾಗಿದೆ ಎಂದರು.

ಪ್ರಪಂಚದಾದ್ಯಂತ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು ಮತ್ತು ಅವು ಸಾಮಾನ್ಯ ಜನರ ಜೀವನದ ಮೇಲೆ ಬೀರುವ ಪ್ರಭಾವದ ಬಗ್ಗೆಯೂ ಮೋದಿ ಮಾತನಾಡಿದರು. ಜಗತ್ತು ಹೆಚ್ಚುತ್ತಿರುವ ಉದ್ವಿಗ್ನತೆಗಳನ್ನು ಕಾಣುತ್ತಿದೆ ಮತ್ತು ಅವು ಸಾಮಾನ್ಯ ಜನರ ಜೀವನದ ಮೇಲೆ ಗಮನಾರ್ಹ ನಕಾರಾತ್ಮಕ ಪರಿಣಾಮ ಬೀರುತ್ತಿವೆ ಎಂದರು.

# ರಾಜ್ಯದಲ್ಲಿ 800 ಬಾಲ ಕಾರ್ಮಿಕರ ರಕ್ಷಣೆ

**ಸಿಎಂ ಡಿಕೆಶಿ ನಿರ್ದೇಶನದ ಬೆನ್ನಲ್ಲೇ ರಾಜ್ಯಾದ್ಯಂತ 16,951 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ**

**ಬಾಲ ಕಾರ್ಮಿಕರ ಪಟ್ಟಿಯಲ್ಲಿ ಬೆಂಗಳೂರೇ ಅಗ್ರಸ್ಥಾನ**

**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇತ್ತೀಚೆಗೆ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣಕ್ಕೆ ಅನಿರೀಕ್ಷಿತ ಭೇಟಿ ನೀಡಿದಾಗ ಅಲ್ಲಿ ಮಕ್ಕಳು ಕೆಲಸ ಮಾಡುತ್ತಿರುವುದನ್ನು ಗಮನಿಸಿ ತಕ್ಷಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು.

ಇದರ ಬೆನ್ನಲ್ಲೇ, ರಾಜ್ಯಾದ್ಯಂತ 16,951 ಸ್ಥಳಗಳಲ್ಲಿ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಒಟ್ಟು 800 ಬಾಲ ಕಾರ್ಮಿಕರನ್ನು ರಕ್ಷಿಸಲಾಗಿದೆ. ಬೆಂಗಳೂರು ನಗರ ಪೊಲೀಸರು 503 ಬಾಲ ಕಾರ್ಮಿಕರನ್ನು ರಕ್ಷಿಸುವ ಮೂಲಕ ಬೆಂಗಳೂರು ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರೆ,

ಶನಿವಾರ ಬೆಳಗ್ಗೆ 10 ಗಂಟೆಗೆ ಬೆಂಗಳೂರು ನಗರದಲ್ಲಿ ಆರಂಭವಾದ ಈ ವಿಶೇಷ



ಕಾರ್ಯಾಚರಣೆಯ ನೇತೃತ್ವವನ್ನು ನಗರದ ಎಲ್ಲಾ 11 ಪೊಲೀಸ್ ವಿಭಾಗಗಳ ಡಿಸಿಪಿಗಳು ಹಾಗೂ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಇಬ್ಬರು ಡಿಸಿಪಿಗಳು

ಪುಟ 2ಕ್ಕೆ

### ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಅಂಗಡಿಗಳ ವಿರುದ್ಧ ಕಾನೂನು ಕ್ರಮ

ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಅಂಗಡಿಗಳ ವಿರುದ್ಧ ಕಾನೂನು ಕ್ರಮಕ್ಕಾಗಿ ತ್ವರಿತವಾಗಿ ಕಾರ್ಯನಿರ್ವಹಿಸಿದ ಉತ್ತರ ವಿಭಾಗದ ಪೊಲೀಸರು, ಉಪ ಪೊಲೀಸ್ ಆಯುಕ್ತರ ಮೇಲ್ವಿಚಾರಣೆಯಲ್ಲಿ ಸಹಾಯಕ ಪೊಲೀಸ್ ಆಯುಕ್ತರು, ಪೊಲೀಸ್ ನಿರೀಕ್ಷಕರು ಮತ್ತು ಕಾರ್ಮಿಕ ನಿರೀಕ್ಷಕರನ್ನು ಒಳಗೊಂಡ ಐದು ವಿಶೇಷ ತಂಡಗಳನ್ನು ರಚಿಸಿದ್ದರು.

### ಎಷ್ಟು ಮಕ್ಕಳ ರಕ್ಷಣೆ?

ವಿಜಯಪುರದಲ್ಲಿ 72, ತುಮಕೂರಿನಲ್ಲಿ 33, ಕೊಪ್ಪಳದಲ್ಲಿ 27, ಕಲಬುರಗಿಯಲ್ಲಿ 22, ಬಳ್ಳಾರಿಯಲ್ಲಿ 15 ಮತ್ತು ಮೈಸೂರಿನಲ್ಲಿ 13 ಮಕ್ಕಳನ್ನು ರಕ್ಷಿಸಲಾಗಿದೆ.

## ಎಲ್ಲೇ ಗಣಪತಿ ಹಬ್ಬಕ್ಕೆ ತೊಂದರೆ ಆದರೂ ನಾನು ಬರ್ತೀನಿ: ಅಶೋಕ್

**ಬೆಂಗಳೂರು:** ಗಣಪತಿ ಹಬ್ಬಕ್ಕೆ ಟಿ. ನರಸೀಪುರ ಇನ್ಸ್ ಪೆಕ್ಟರ್ ಧನಂಜಯ್ ಹಲವು ನಿರ್ಬಂಧಗಳನ್ನು ಹಾಕಿರುವುದಕ್ಕೆ ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿ, ಹಿಂದೂಗಳ ತಂಟೆಗೆ ಹೋದರೆ ಹುಷಾರ್. ಎಲ್ಲೇ ಗಣಪತಿ ಹಬ್ಬಕ್ಕೆ ತೊಂದರೆ ಆದರೂ ನಾನು ಬರುತ್ತೇನೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನೆಮ್ಮದಿಯಿಂದ ಗಣೇಶೋತ್ಸವ ಮಾಡಲೂ ಬಿಡ್ತಿಲ್ಲ. ಇಡೀ ರಾಜ್ಯಾದ್ಯಂತ ಸರ್ಕಾರದಿಂದ ಕಿರುಕುಳ ನಡೆಯುತ್ತಿದೆ. ಇನ್ಸ್ ಪೆಕ್ಟರ್ ಧನಂಜಯ್ ಹೀಗೆ ಮಾತನಾಡಿದ್ದಾರೆ ಎಂದರೆ ಇದರ ಹಿಂದೆ ದೊಡ್ಡ ಷಡ್ಯಂತ್ರ ಇದೆ. ಸರ್ಕಾರದ ಕುಮ್ಮಕ್ಕಿದೆ. ಕರ್ನಾಟಕದಲ್ಲಿ ಹಿಂದೂ ವಿರೋಧಿ ಸರ್ಕಾರ ಇದೆ



ಎಂದು ವಾಗ್ದಾಳಿ ನಡೆಸಿದರು.

ಟಿ.ನರಸೀಪುರದಲ್ಲಿ ಇನ್ಸ್ ಪೆಕ್ಟರ್ ಧನಂಜಯ್ ದುರಹಂಕಾರದಿಂದ ಮಾತನಾಡಿದ್ದಾರೆ. ಮಸೀದಿ ಮುಂದೆ ಮೆರಣಿಗೆ ಮಾಡುವಂತಿಲ್ಲ, ಪಟಾಕಿ ಹೊಡೆಯುವಂತಿಲ್ಲ ಅಂದಿದ್ದಾರೆ. ನೀವೇನು ರೌಡಿನಾ ? ಗ್ರಹಚಾರ ಬಿಡಿಸೋಕೆ ಅಥವಾ ಮೆರವಣಿಗೆ ಮಾಡೋರು

## ದೆಹಲಿಯಲ್ಲಿ ಭಾರಿ ಬೆಂಕಿ ಅವಘಡ; 6 ಜನರಿಗೆ ಗಾಯ



**ದೆಹಲಿ:** ಸ್ವರೂಪ್ ನಗರ ಪ್ರದೇಶದ ಗೋದಾಮಿನಲ್ಲಿ ಭಾರಿ ಬೆಂಕಿ ಅವಘಡ ಸಂಭವಿಸಿದೆ. ಮಕ್ಕಳು ಮತ್ತು ಮಹಿಳೆಯರು ಸೇರಿ ಆರು ಜನರು ಗಾಯಗೊಂಡಿದ್ದಾರೆ.

ಘಟನೆಯ ಮಾಹಿತಿ ಪಡೆದ ದೆಹಲಿ ಅಗ್ನಿಶಾಮಕ ದಳದ ತಂಡಗಳು ಸ್ಥಳಕ್ಕೆ ಆಗಮಿಸಿವೆ. ಬೆಂಕಿಯನ್ನು ನಂದಿಸಲು ಹದಿನೈದು ಅಗ್ನಿಶಾಮಕ ದಳದ ವಾಹನಗಳನ್ನು ನಿಯೋಜಿಸಲಾಗಿದೆ.

ಗೋದಾಮಿನ ಬೆಂಕಿಯನ್ನು ನಿಯಂತ್ರಿಸಲು ಅಗ್ನಿಶಾಮಕ ಕಾರ್ಯಾಚರಣೆ ನಡೆಯುತ್ತಿದೆ. ಬೆಂಕಿಗೆ

ಪುಟ 2ಕ್ಕೆ

## ಬಳ್ಳಾರಿ ಚಲೋ: ಸೋಮಶೇಖರ್ ರೆಡ್ಡಿ, ರೇಣುಕಾಚಾರ್ಯ ಸೇರಿ 22 ಬಿಜೆಪಿ ನಾಯಕರ ವಿರುದ್ಧ ಎಫ್‌ಐಆರ್

**ಬಳ್ಳಾರಿ:** ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಮತ್ತು ಭ್ರಷ್ಟಾಚಾರವನ್ನು ಖಂಡಿಸಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಬಳ್ಳಾರಿ ಚಲೋ' ಪಾದಯಾತ್ರೆಗೆ ಸಂಬಂಧಿಸಿದಂತೆ ನಿಯಮಗಳ ಉಲ್ಲಂಘನೆಗಾಗಿ ಮಾಜಿ ಶಾಸಕರಾದ ಸೋಮಶೇಖರ್ ರೆಡ್ಡಿ, ಎಂ.ಪಿ. ರೇಣುಕಾಚಾರ್ಯ ಸೇರಿದಂತೆ ಒಟ್ಟು 22 ಬಿಜೆಪಿ ನಾಯಕರ ವಿರುದ್ಧ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಸೆಪ್ಟೆಂಬರ್ 9 ರಂದು ಬಳ್ಳಾರಿ ಮತ್ತು ಹೊಸಪೇಟೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 67 ರಲ್ಲಿ ರಸ್ತೆ ತಡೆ ನಡೆಸಿ ವಾಹನ ಸಂಚಾರವನ್ನು ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿದರು. ಇದರಿಂದಾಗಿ ಸಾರ್ವಜನಿಕ



ರಿಗೆ ತೀವ್ರ ತೊಂದರೆ ಉಂಟಾಗಿತ್ತು. ಅನುಮತಿಯಿಲ್ಲದೆ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಪೊಲೀಸರು ಈಗ 22 ನಾಯಕರ ವಿರುದ್ಧ ಕ್ರಮ ಕೈಗೊಂಡಿದ್ದಾರೆ.

### ಎಫ್‌ಐಆರ್ ದಾಖಲಾಗಲು ಕಾರಣವೇನು?

ಸೆಪ್ಟೆಂಬರ್ 1 ರಿಂದ ಸೆಪ್ಟೆಂಬರ್ 10 ರವರೆಗೆ ನಡೆದ ಬಿಜೆಪಿಯ ರಾಯಚೂರು ಟು ಬಳ್ಳಾರಿಯ 10 ದಿನಗಳ ಪಾದಯಾತ್ರೆಯ ಸಮಾರೋಪ ಸಮಾವೇಶದ ಸಂದರ್ಭದಲ್ಲಿ ಕೋಳಗಲ್ಲು ಪಂಚಾಯತ್ ವ್ಯಾಪ್ತಿಯ ಬಿಐಟಿಎಂ ಕಾಲೇಜಿನ ವರೆಗೆ ಮಾತ್ರ ಪಕ್ಷದ ಧ್ವಜಗಳನ್ನು ಅಳವಡಿಸಲು ಜಿಲ್ಲಾಡಳಿತ ಅನುಮತಿ ನೀಡಿತ್ತು. ಜೊತೆಗೆ, ಪಾಲಿಕೆ ಸಿಬ್ಬಂದಿ ಬ್ಯಾನರ್ ತೆರವುಗೊಳಿಸಿದ್ದನ್ನು ತೀವ್ರವಾಗಿ ಖಂಡಿಸಿದ ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.

### ಯಾರ ಯಾರ ಮೇಲೆ ಎಫ್‌ಐಆರ್?

ಮಾಜಿ ಸಚಿವರೂ ಆಗಿರುವ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತು ಜಿ. ಸೋಮಶೇಖರ್ ರೆಡ್ಡಿ ಅವರನ್ನು ಮುಖ್ಯ ಆರೋಪಿಗಳನ್ನಾಗಿ ಮಾಡಲಾಗಿದ್ದು, ಇವರೊಂದಿಗೆ ಇತರ 20 ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.



# ಹೇರಂಬ ಪಂಚಮುಖಿ ಗಣಪತಿ ಪ್ರತಿಷ್ಠಾಪನೆ

## ರಾಮನಗರದಲ್ಲಿ ಮುದ್ಗಲ್ ಪುರಾಣದಲ್ಲಿ ಉಲ್ಲೇಖದಂತೆ ಮೂರ್ತಿ ರಚನೆ । ಬಹುಶಃ ರಾಜ್ಯದಲ್ಲೇ ಪ್ರಥಮ

ರಾಮನಗರ: ಪ್ರತಿ ವರ್ಷ ಗಣೇಶೋತ್ಸವಕ್ಕೆ ವೈವಿಧ್ಯಮಯವಾದ ಗಣಪತಿಗಳನ್ನು ಪ್ರತಿಷ್ಠಾಪಿಸುತ್ತಿರುವ ನಗರದ ಶ್ರೀ ಅರ್ಕಾವತಿ ವಿದ್ಯಾಗಣಪತಿ ಯುವ ಸೇವಾ ಸಂಘ ಹಾಗೂ ಅರಳೀಕಟ್ಟೆ ಗೆಳೆಯರ ಬಳಗ ಇದೀಗ 42ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಮುದ್ಗಲ್ ಪುರಾಣದ ಹೇರಂಬ ಪಂಚಮುಖಿ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಿದೆ.

ಪಂಚಮುಖಿ ಗಣಪತಿ ಮೂರ್ತಿಯಲ್ಲಿ ಪ್ರಮುಖವಾಗಿ ವಿನಾಯಕನ ಮುಖವಿದೆ. ಆಂಜನೇಯ, ಗರುಡ ಹಾಗೂ ನರಸಿಂಹ, ವರಹ ಮುಖಗಳನ್ನು ಒಳಗೊಂಡಿದೆ. 7 ಅಡಿ ಎತ್ತರದ ಬೃಹತ್ ಮಣ್ಣಿನ ಹೇರಂಬ ಪಂಚಮುಖಿ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಿದೆ.

ರಾಜ್ಯದಲ್ಲಿಯೇ ಮೊದಲ ಬಾರಿ ಎನ್ನಲಾದ ಹೇರಂಬ ಪಂಚಮುಖಿ ಗಣಪತಿಯನ್ನು ಸೇವಾ ಸಂಘ ಪ್ರತಿಷ್ಠಾಪಿಸುತ್ತಿದೆ. ಗಣೇಶ ಸೇರಿ ಐದು ಮುಖಗಳ ತಲೆ ಮೇಲು ಕಿರೀಟ ಧರಿಸಿದ್ದು, 8 ಕೈಗಳನ್ನು ಹೊಂದಿರುವ ಹೇರಂಬ ಪಂಚಮುಖಿ ಗಣಪತಿ ಮೂರ್ತಿ ಸಿಂಹದ ಮೇಲೆ ಆಸೀನನಾಗಿದ್ದಾನೆ. ಇದು ಈ ಬಾರಿಯ ವಿಶೇಷತೆಯಾಗಿದೆ.

### ಗಮನಸೆಳೆಯುತ್ತಿರುವ ವಿಭಿನ್ನ ಗಣಪತಿ ಮೂರ್ತಿಗಳು

ಸೇವಾ ಸಂಘ 25ನೇ ವರ್ಷದ ಪ್ರಯುಕ್ತ ವೆಂಕಟರಣಮಸ್ವಾಮಿ ರೂಪ ತಾಳಿದ ಗಣಪತಿ ಜೊತೆಗೆ 24 ವರ್ಷಗಳಲ್ಲಿ ಪ್ರತಿಷ್ಠಾಪಿಸಿದ್ದ ವಿಭಿನ್ನ ಮಾದರಿಯ ಗಣಪತಿ ಮೂರ್ತಿಗಳನ್ನು ಕೂರಿಸಿ ಗಮನ ಸೆಳೆದಿದ್ದರು. ಆನಂತರ 30ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ವಿಷ್ಣು ಗಣಪತಿ ಪ್ರಧಾನ ಮೂರ್ತಿಯ ಜೊತೆಗೆ ಮುದ್ಗಲ ಪುರಾಣದಲ್ಲಿ ಬರುವ 32 ಬಗೆಯ ಬಾಲಗಣಪತಿ ಮೂರ್ತಿಗಳ ಸಮೇತ ಶ್ರೀ ಲಕ್ಷ್ಮಿ, ಸರಸ್ವತಿ, ವೆಂಕಟೇಶ್ವರ, ಶ್ರೀರಾಮ, ಶ್ರೀ ಕೃಷ್ಣ, ಹನುಮಂತ, ಮಂಜುನಾಥ, ಶಿವ ಪಾರ್ವತಿ, ಅಯ್ಯಪ್ಪ, ಸುಬ್ರಹ್ಮಣ್ಯ, ಸಾಯಿಬಾಬಾ, ಅನಂತ ಪದ್ಮನಾಭ, ಬ್ರಹ್ಮ, ರಾಘವೇಂದ್ರ, ಪಾಂಡುರಂಗ, ಅನ್ನಪೂರ್ಣೇಶ್ವರಿ, ಕಾವೇರಿಮಾತೆ ಸೇರಿದಂತೆ ಸುಮಾರು 29 ವಿವಿಧ ದೇವರುಗಳನ್ನು ಪ್ರತಿಷ್ಠಾಪಿಸಲಾಗಿತ್ತು.

ಸೇವಾ ಸಂಘದ ವತಿಯಿಂದ ನಡೆಯುವ ಅದ್ದೂರಿ ಗಣೇಶೋತ್ಸವಕೆ ಕೋವಿಡ್–19 ಸಂದರ್ಭದಲ್ಲಿ ಅಡ್ಡಿ ಉಂಟಾಗಿತ್ತು. ಇತಿಹಾಸದಲ್ಲೇ ಮೊದಲ ಬಾರಿಗೆ ಅಂದು ಸಣ್ಣ ಗಾತ್ರದ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ಆ ಸಂದರ್ಭದಲ್ಲೂ ಬೃಹತ್ ಗಾತ್ರದ ಗಣಪತಿಯನ್ನು ಪ್ರತಿಷ್ಠಾಪಿಸಲು ಸೇವಾ ಸಂಘ ತೀರ್ಮಾನಿಸಿತ್ತು. ಆದರೆ, ಸರ್ಕಾರದ ಆದೇಶದಂತೆ ಯಾವುದೇ ವಿಜೃಂಭಣೆ ಇಲ್ಲದೇ ಗಣೇಶೋತ್ಸವವನ್ನು ಆಚರಣೆ ಮಾಡಲಾಗಿತ್ತು.

### ಮುದ್ಗಲ್ ಪುರಾಣದಲ್ಲಿ ಇರುವಂತೆ ಪಂಚಮುಖಿ

ಗಣೇಶನ ರೂಪಗಳಲ್ಲೇ ಪಂಚಮುಖಿ ಗಣೇಶನ ರೂಪ ತುಂಬಾನೇ ಶ್ರೇಷ್ಠವಾದುದ್ದಾಗಿದೆ. ಪಂಚಮುಖಿ ಗಣೇಶನೆಂದರೆ 5 ವಿವಿಧ ಮುಖವುಳ್ಳ ಗಣೇಶನ ರೂಪವೇ ಆಗಿದ್ದು, ಪಂಚಮುಖಿ ಗಣೇಶನ 5 ಮುಖಗಳು 5 ರೀತಿಯ ಮಹತ್ವವನ್ನು ಹೊಂದಿರುತ್ತದೆ. ಆದರೆ, ಮೂಲ ಮುದ್ಗಲ್ ಪುರಾಣದ ಹೇರಂಬ ಪಂಚಮುಖಿ ಗಣಪತಿ ಮೂರ್ತಿ ವಿಭಿನ್ನವಾಗಿದೆ. ಸಿಂಹದ ಮೇಲೆ ಆಸೀನನಾಗಿರುವ ಗಣಪತಿ ಮೂರ್ತಿಯ ಶಿರದ ಬಲ ಬದಿಯಲ್ಲಿ ಆಂಜನೇಯ, ಗರುಡು ಹಾಗೂ ಎಡ ಬದಿಯಲ್ಲಿ ನರಸಿಂಹ, ವರಹ ಮುಖವುಳ್ಳ ಮೂರ್ತಿಗಳಿವೆ. ಛತ್ರದ ಬೀದಿಯಲ್ಲಿ ಗಣೇಶೋತ್ಸವವನ್ನು ವರ್ಷದಿಂದ ವರ್ಷಕ್ಕೆ ವೈವಿಧ್ಯಮಯವಾಗಿ ಆಚರಿಸುತ್ತಾ ಕಳೆದ 41 ವರ್ಷಗಳಿಂದ ಸತತವಾಗಿ ಸಾರ್ವಜನಿಕರ ಸಹಕಾರದೊಂದಿಗೆ ಗಣೇಶ ಮಹೋತ್ಸವ ಆಚರಿಸಿಕೊಂಡು ಬರುತ್ತಿದ್ದಾರೆ. ಪ್ರತಿ ವರ್ಷವೂ ಹೊಸ ಪ್ರಯೋಗದೊಂದಿಗೆ ಮೋದಕ ಪ್ರಿಯನ ಅನೇಕ ರೂಪಗಳ ದರ್ಶನ ಭಾಗ್ಯ ದೊರಕಿಸಿ ಭಕ್ತಾದಿಗಳಲ್ಲಿ ಹೊಸ ಸಂಚಲನ ಮೂಡಿಸುವಲ್ಲಿ ಸೇವಾ ಸಂಘವು ಶ್ರಮಿಸುತ್ತಿದೆ.

### ಉಮಾಶಂಕರ್ ಅವರ ಕೈಗಳಿಂದ ಮೂಡಿದ ಆಕೃತಿ

ಮಾಗಡಿಯ ಕಲಾವಿದ ಉಮಾಶಂಕರ್ ರವರ ಕೈಚಳಕದಲ್ಲಿ ಪಂಚಮುಖಿ ಗಣಪತಿ ಮೂರ್ತಿ ತಯಾರಾಗಿದೆ. ಪ್ರತಿ ವರ್ಷ ಹೊರ ಜಿಲ್ಲೆಗಳ ಲಕ್ಷಾಂತರ ಮಂದಿ ಭಕ್ತರು ಆಗಮಿಸಿ ಗಣಪತಿ ಮೂರ್ತಿಗಳ ದರ್ಶನ ಪಡೆಯುತ್ತಾರೆ. ಎಲ್ಲಾ ಜನಾಂಗದ ಸಮೃದ್ಧಿ ಮತ್ತು ರಕ್ಷಣೆಯ ಪ್ರತಿರೂಪವಾಗಿ ಈ ಬಾರಿ ಪಂಚಮುಖಿ ಗಣಪತಿ ಮೂರ್ತಿ ಪ್ರತಿಷ್ಠಾಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿಯೇ ವಿಭಿನ್ನವಾಗಿ ಗಣೇಶೋತ್ಸವವನ್ನು ಆಚರಿಸಿರುವುದು ನಮ್ಮ ಸೇವಾ ಸಂಘದ ಪ್ರಯತ್ನವಾಗಿದೆ ಎಂದು ಸಂಘದ ಅಧ್ಯಕ್ಷ ಪಿ. ವೈ .ರವೀಂದ್ರ ಹೇರ್ಳೆ ಪ್ರತಿಕ್ರಿಯೆ ನೀಡಿದರು.



### ಪೂಜಾ ಕಾರ್ಯಕ್ರಮ

ಸೆ.14ರಂದು ಮಧ್ಯಾಹ್ನ 12 ಗಂಟೆಗೆ ನಡೆಯುವ ಪ್ರತಿಷ್ಠಾಪನಾ ಪೂಜಾ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಬಾಲಕೃಷ್ಣ ಉದ್ಘಾಟಿಸಲಿದ್ದು, ಶಾಸಕ ಎಚ್.ಎ. ಇಕ್ಬಾಲ್‌ಹುಸೇನ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಂಸದ ಡಾ.ಸಿ.ಎನ್. ಮಂಜುನಾಥ್, ಮಾಜಿ ಶಾಸಕರಾದ ಸಿ.ಎಂ.ಲಿಂಗಪ್ಪ, ಕೆ. ರಾಜು, ಎ.ಮಂಜುನಾಥ್, ವಿಧಾನ ಪರಿಷತ್ ಮಾಜಿ ಸದಸ್ಯ ಅಶ್ವಥ್ ನಾರಾಯಣಗೌಡ, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಮಾಜಿ ಅಧ್ಯಕ್ಷ ಸಿ.ಎನ್.ಆರ್. ವೆಂಕಟೇಶ್, ಜಬಿಡಿಎ ಅಧ್ಯಕ್ಷ ನಟರಾಜ್, ಕೆಎಸ್‌ಐಸಿ ಮಾಜಿ ಅಧ್ಯಕ್ಷ ಗೌತಮ್‌ಗೌಡ, ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ (ಶಶಿ), ಸದಸ್ಯರಾದ ಮುತ್ತುರಾಜು, ಸೋಮಶೇಖರ್, ಮಹಾಲಕ್ಷ್ಮಿ, ಮಂಜುಳಾ ವೆಂಕಟೇಶ್, ಸರ್ಕಾರಿ ನೌಕರರ ಸಂಘದ ಜಿಲಾಧ್ಯಕ್ಷ ಸತೀಶ್, ಮಾಜಿ ಅಧ್ಯಕ್ಷ ಆರ್.ಕೆ.ಬೈರಲಿಂಗಯ್ಯ, ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ತಹಸೀಲ್ದಾರ್ ತೇಜಸ್ವಿನಿ, ನಗರಸಭೆ ಆಯುಕ್ತ ಡಾ.ಜಯಣ್ಣ, ಸಮಾಜ ಸೇವಕರಾದ ಜಿ.ಪಿ.ಪ್ರಶಾಂತ್, ಕೆ.ಆರ್.ನಾಗೇಶ್, ಕೆ.ಆರ್. ಪ್ರದೀಪ್, ಲಕ್ಷ್ಮಣ್ ಸೇರಿದಂತೆ ಸಮಿತಿಯ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

### ಬಳಗದ ಇತಿಹಾಸ:

ಪ್ರತಿವರ್ಷ ಗಣೇಶೋತ್ಸವ ಆಚರಿಸಿಕೊಂಡು ಬರುತ್ತಿ ರುವ ಶ್ರೀ ಅರ್ಕಾವತಿ ವಿದ್ಯಾಗಣಪತಿ ಯುವ ಸೇವಾ ಸಂಘ ಹಾಗೂ ಅರಳೀಕಟ್ಟೆ ಗೆಳೆಯರ ಬಳಗಕ್ಕೆ 42 ವರ್ಷಗಳ ಇತಿಹಾಸವಿದೆ. 1984 ರಿಂದಲೂ ನಗರದ ಛತ್ರದ ಬೀದಿಯಲ್ಲಿ ಗಣಪತಿಯನ್ನು ಪ್ರತಿ ವರ್ಷ ಪ್ರತಿಷ್ಠಾಪಿಸಿ, ಅದ್ದೂರಿಯಾಗಿ ಗಣೇಶೋತ್ಸವವನ್ನು ನೆರವೇರಿಸಿಕೊಂಡು ಬರಲಾಗುತ್ತಿದೆ. ಅಂತೆಯೇ ಆಕ ರ್ಷಕ ಜನಪದ ಕಲಾತಂಡಗಳೊಂದಿಗೆ ವಿಜೃಂಭಣೆಯ ಮೆರವಣಿಗೆಯ ಮೂಲಕ ನಗರದ ರಂಗರಾ ಯರ ದೊಡ್ಡಿ ಕೆರೆಯಲ್ಲಿ ವಿಸರ್ಜನೆ ಮಾಡಲಾಗುತ್ತದೆ. ಸೇವಾ ಸಂಘ ಮತ್ತು ಬಳಗದ ಕಾರ್ಯಕಾರಿ ಸಮಿ ತಿಯಲ್ಲಿ ಗೌರವಾಧ್ಯಕ್ಷರಾಗಿ ಲಕ್ಷ್ಮಣ್, ಕೆ.ಆರ್ . ನಾಗೇಶ್ , ಅಧ್ಯಕ್ಷರಾಗಿ ಪಿ. ವೈ ರವಿಂದ್ರ ಹೇರ್ಳೆ, ಪ್ರಧಾನ ಕಾರ್ಯದರ್ಶಿಯಾಗಿ ಉಮಾ ಮಹದೇ ವಪ್ಪ, ಖಜಾಂಚಿಯಾಗಿ ಎಂ.ಗಿರೀಶ್ ರಾವ್ , ಸಂಚಾಲಕರಾಗಿ ರಾಜು, ಆರ್ .ಲೋಹಿತ್ , ಆರ್ .ಪಿ.ಪ್ರಶಾಂತ್ , ಗುರುಪ್ರಸಾದ್ , ವಿ.ಶಾಂತಕುಮಾರ್ , ಎಂ.ಮಹದೇವ್ , ಶಿವಪ್ರಕಾಶ್ , ಆರ್ . ಪ್ರಶಾಂತ್ , ಶಿವರುದ್ರ, ಮಾದೇಶ, ಶಿವಕುಮಾರ್ ಕಾರ್ಯನಿರ್ವಹಿಸುತ್ತಿದ್ದಾರೆ.

---

# ಡೇರಿಗಳ ಪ್ರಗತಿಯಿಂದ ಗ್ರಾಮಗಳ ಅಭಿವೃದ್ಧಿ

ಚಾಮರಾಜನಗರ, ಸಂಸ್ಥೆಯಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರಗತಿಯಿಂದ ರೈತರು ಹಾಗೂ ಗ್ರಾಮದ ಅಭಿವೃದ್ಧಿಯಾಗುತ್ತದೆ ಎಂದು ಚಾಮುಲ್ ಹಿರಿಯ ನಿರ್ದೇಶಕ ಎಚ್.ಎಸ್. ಬಸವರಾಜು ತಿಳಿಸಿದರು.

ತಾಲೂಕಿನ ಬಸವಾಪುರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಸವಾಪುರ ಗ್ರಾಮದ ಡೇರಿ ಲಾಭದಲ್ಲಿದ್ದು, ರೈತರು ಗುಣಮಟ್ಟದ ಹಾಲು ಸಬರಾಜು ಮಾಡಿದ ಪರಿಣಾಮ ಡೇರಿ ಸ್ವಂತ ಕಟ್ಟಡವನ್ನು ಹೊಂದಲು ಸಾಧ್ಯವಾಗಿದೆ. ಚಾಮುಲ್ ರೈತರ ಸಂಸ್ಥೆಯಾಗಿದ್ದು, ನೀವುಗಳು ಡೇರಿಗೆ ಹಾಕುವ ಪ್ರತಿ ಲೀಟರ್ ಹಾಲು ಸಹ ಸಂಸ್ಕರಣೆ ಗೊಂಡು ಹಾಲು, ಮೊಸರು, ಮಜ್ಜಿಗೆ ತುಪ್ಪ, ಬೆಣ್ಣೆ ಸೇರಿದಂತೆ ನಂದಿನಿ ಉಪ ಉತ್ಪನ್ನಗಳಾಗುತ್ತದೆ. ಹೊರ ರಾಜ್ಯ ಹಾಗೂ ದೇಶಗಳಿಗೆ ಹಾಲು ಪೂರೈಕೆಯಾಗುತ್ತದೆ. ಡೇರಿ ಪ್ರಗತಿಯಿಂದ ರೈತರು ಹಾಗೂ ಗ್ರಾಮದ ಅಭಿವೃದ್ಧಿಯಾಗುತ್ತದೆ ಎಂದರು.

ಮತ್ತೋರ್ವ ನಿರ್ದೇಶಕ ಸದಾಶಿವಮೂರ್ತಿ ಮಾತನಾಡಿ, ಹೈನುಗಾರಿಕೆಯನ್ನು ವೈಜ್ಞಾನಿಕ ಪದ್ಧತಿ ಹಾಗೂ ತಾಂತ್ರಿಕತೆಯನ್ನು ಅಳವಡಿಸಿಕೊಂಡು ರೈತರು ಮುನ್ನಡೆದರೆ ಹೆಚ್ಚಿನ ಲಾಭ ಪಡೆದುಕೊಳ್ಳಲು ಸಾಧ್ಯವಿದೆ. ಹಾಲು ಉತ್ಪಾದನೆ ಬಹಳಷ್ಟು ರೈತರಿಗೆ ಮುಖ್ಯ ಕಸುಬಾಗಿದೆ. ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುತ್ತದೆ ಎಂದರು.



▸▸ ಎಚ್. ಎಸ್. ಬಸವರಾಜು ಅಭಿಮತ
▸▸ ಬಸವಾಪುರ ಡೇರಿ ನೂತನ ಕಟ್ಟಡ

ಚಾಮುಲ್ ವ್ಯವಸ್ಥಾಪಕ ನಿರ್ದೇಶಕ ರಾಜಕುಮಾರ್ ಮಾತನಾಡಿ, ಚಾಮುಲ್ ಸ್ಥಾಪನೆಯಿಂದ ಜಿಲ್ಲೆಯ ಅಭಿವೃದ್ಧಿ ವೇಗ ಪಡೆದುಕೊಂಡಿದೆ. ಕುದೇರಿನಲ್ಲಿರುವ ಚಾಮುಲ್ ಘಟಕ ಪ್ರತಿ ದಿನ 3 ಲಕ್ಷ ಲೀಟರ್ ಹಾಲು ಸಂಗ್ರಹಿಸುವ ಜೊತೆಗೆ ಮುಂದಿನ ದಿನಗಳಲ್ಲಿ ಐಸ್‌ಕ್ರಿಂ ಘಟಕವನ್ನು ಸ್ಥಾಪನೆ ಮಾಡಲಿದೆ. ಬರ ಹಾಗೂ ಗಡಿ ಜಿಲ್ಲೆಗೆ ಹೈನುಗಾರಿಕೆಯಿಂದ ಹೆಚ್ಚಿನ ಲಾಭವಾಗುತ್ತಿದೆ. ಇದನ್ನು ರೈತರು ಇನ್ನು ಹೆಚ್ಚಿನ ರೀತಿಯಲ್ಲಿ ಅವಲಂಭಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಭಾರ ವ್ಯವಸ್ಥಾಪಕ ಎಚ್.ಸಿ. ಶರತ್‌ಕುಮಾರ್, ಉಪ ವ್ಯವಸ್ಥಾಪಕ ಡಾ. ಅಮರ್, ವಿಸ್ತಾರಣಾಧಿಕಾರಿ ಭಾಗ್ಯರಾಜ್, ಸಂಘದ ಉಪಾಧ್ಯಕ್ಷ ನಾಗಯ್ಯ, ನಿರ್ದೇಶಕರಾದ ಪುಟ್ಟಲಿಂಗನಾಯಕ, ಗುರುಸ್ವಾಮಿ, ರಂಗಸ್ವಾಮಿ, ಮಹದೇವಸ್ವಾಮಿ, ಮಹದೇವೇಗೌಡ, ಮಹದೇವಯ್ಯ, ಮಹದೇವಸ್ವಾಮಿ, ರೇಖಾಮ್ಮ, ನಾಗರಾಜಮ್ಮ, ಜ್ಯೋತಿ, ಜಯಲಕ್ಷ್ಮಿ, ಸಿಇಓ ಮರಮ್ಮ, ಸಂಘದ ಸದಸ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು.

# 2ನೇ ತಂಡದ ಗಜಪಡೆಗೆ ಸ್ವಾಗತ



ಮೈಸೂರು: ನಾಡಹಬ್ಬ ದಸರಾದ ಪ್ರಮುಖ ಆಕರ್ಷಣೆ ಜಂಬೂ ಸವಾರಿ ಮೆರವಣಿಗೆಯಲ್ಲಿ ಭಾಗವಹಿಸಲು ಆಗಮಿಸಿದ ಗಜಪಡೆಯ ಎರಡನೇ ತಂಡ ಮೂರು ಆನೆಗಳನ್ನು ಮೈಸೂರು ಅರಮನೆಯ ಮುಂಭಾಗದ ಜಯಮಾರ್ತಾಂಡ ದ್ವಾರದ ಬಳಿ ಗಜಪಡೆಗೆ ಸಾಂಪ್ರಾದಾಯಿಕವಾಗಿ ಸ್ವಾಗತಿಸಲಾಯಿತು.

ಈಗಾಗಲೇ ಮೊದಲ ತಂಡದಲ್ಲಿ ಆಗಮಿಸಿರುವ 9 ಆನೆಗಳು ಜಂಬೂ ಸವಾರಿ ಮಾರ್ಗದ ತಾಲೀಮಿನಲ್ಲಿ ಪಾಲ್ಗೊಳ್ಳುತ್ತಿದ್ದು, ಅವುಗಳಿಗೆ ಪೌಷ್ಟಿಕ ಆಹಾರ ನೀಡಿ ಆರೈಕೆ ಮಾಡಲಾಗುತ್ತಿದೆ. ದಸರಾ ಉದ್ಘಾಟನೆಗೂ ಮುನ್ನ ಎರಡನೇ ತಂಡದ ಆನೆಗಳನ್ನು ಕರೆತರಲಾಗಿದೆ. ಅ.11 ರಿಂದ ಈ ಸಾಲಿನ ದಸರಾ ಮಹೋತ್ಸವ ಆರಂಭವಾಗಲಿದ್ದು, ಅ.21 ರಂದು ಜಂಬೂಸವಾರಿ ನೆರವೇರಲಿದೆ.

### ಎರಡನೇ ತಂಡ

ಎರಡನೇ ತಂಡದಲ್ಲಿ ಕರೆತರಲಾದ 3 ಆನೆಗಳಲ್ಲಿ ಎರಡು ಹೆಣ್ಣಾನೆ ಹಾಗೂ ಒಂದು ಹೊಸ ಗಂಡಾನೆ ಸೇರಿವೆ. ರಾಮಪುರ ಶಿಬಿರದಿಂದ ಬಂದ ಚೈತ್ರ ಆನೆ, ದುಬಾರಿ ಶಿಬಿರದಿಂದ ಸುಗ್ರೀವ ಆನೆ ಹಾಗೂ ದೊಡ್ಡ ಹರವೆ ಶಿಬಿರದಿಂದ ರೂಪ ಆನೆ ಆಗಮಿಸಿದ್ದು ಅವುಗಳನ್ನು ಸ್ವಾಗತಿಸಲಾಯಿತು. ಮೂರು ಆನೆಗಳಿಗೆ ಅರಿಶಿಣ ಕುಂಕುಮ ಹಾಕಿ ಅವುಗಳನ್ನ ಅರಮನೆ ಮುಂಭಾಗದಲ್ಲಿರುವ ಜಯ ಮಾರ್ತಾಂಡ ದ್ವಾರದ ಬಳಿ ಸಾಲಾಗಿ ನಿಲ್ಲಿಸಿ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಅರಮನೆ ಆಡಳಿತ ಮಂಡಳಿ ಪೂಜೆ ಸಲ್ಲಿಸಿದರು. ನಂತರ ಪುಷ್ಪಾರ್ಚನೆ ಮಾಡಿ ಬಳಿಕ ಕುಂಬಳಕಾಯಿ ಒಡೆದು ದೃಷ್ಟಿ ತೆಗೆದು ಅರಮನೆಗೆ ಸಾಂಪ್ರದಾಯಿಕವಾಗಿ ಬರಮಾಡಿಕೊಳ್ಳಲಾಯಿತು. ಪ್ರಶಾಂತ, ಏಕಲವ್ಯ ಆನೆಗಳನ್ನು ಸಹ ಮೂರು ಆನೆಗಳೊಟ್ಟಿಗೆ ನಿಲ್ಲಿಸಿ ಮತ್ತೆ ಪೂಜೆ ಸಲ್ಲಿಸಿ ಸ್ವಾಗತಿಸಿಕೊಳ್ಳಲಾಯಿತು. ಶ್ರೀಕಂಠ, ಮಹೇಂದ್ರ, ಧನಂಜಯ, ಗೋಪಿ, ಶ್ರೀರಾಮ, ಕಾವೇರಿ, ಲಕ್ಷ್ಮೀ ಆನೆಗಳು ಈಗಾಗಲೇ ಅರಮನೆ ಆಡಳಿತ ಮಂಡಳಿ ಆಶ್ರಯದಲ್ಲಿವೆ. ಡಿಸಿಎಫ್ ಪ್ರಭುಗೌಡ, ಅರಮನೆ ಆಡಳಿತ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಇನ್ನಿತರರು ಇದ್ದರು.

---

### ಶಾಸಕ ಜಿ.ಟಿ.ದೇವೇಗೌಡರಿಗೆ ಅಭಿನಂದನೆ



ಮೈಸೂರು ಹೋಟೆಲ್ ಮಾಲೀಕರ ಸಂಘದವತಿಯಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ರಾಗಿ ಸತತವಾಗಿ 7ನೇ ಬಾರಿಗೆ ಆಯ್ಕೆಯಾಗಿರುವ ಶಾಸಕ ಜಿ.ಟಿ.ದೇವೇಗೌಡರಿಗೆ ಮೈಸೂರು ಪೇಟ ತೊಡಿಸಿ, ಹಾರ ಹಾಕಿ, ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಹಾಗೂ ರಾಜ್ಯ ಹೋಟಲುಗಳ ಸಂಘದ ಉಪಾಧ್ಯಕ್ಷ ಸಿ.ನಾರಾಯಣಗೌಡ, ಪದಾಧಿಕಾರಿಗಳಾದ ಜಿ.ಅಶೋಕ್, ಕೆ.ಪ್ರಕಾಶ್ ಶೆಟ್ಟಿ, ಎಂ.ಎಸ್. ಜಯಪ್ರಕಾಶ್, ಹೇಮಂತ್ ಕುಮಾರ್, ಸುಧಾಕರ್ ಪೂಜಾರಿ, ನಾರಾಯಣ ವಿ ಹೆಗಡೆ, ಪಾಂಡುರಂಗ, ಕೆ.ಎಸ್.ಅರುಣ್, ಕೆ.ಭಾಸ್ಕರ್ ಶೆಟ್ಟಿ, ಉಗ್ರಯ್ಯ ಇನ್ನಿತರರು ಇದ್ದರು.

### ಕರ್ತವ್ಯ ಮುಗಿಸಿ ಬಂದ ಪೇದೆ ಹೃದಯಾಘಾತದಿಂದ ಸಾವು

ಚಿಕ್ಕಬಳ್ಳಾಪುರ: ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ (ಆಂಖ)ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಪೇದೆ ಐರಾಜು (40) ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಚಿಂತಾಮಣಿ ನಗರದ ವೆಂಕಟಗಿರಿಕೋಟೆ ಕಾಲೋನಿ ನಿವಾಸಿಯಾಗಿದ್ದ ಐರಾಜು, ರಾತ್ರಿ ಕರ್ತವ್ಯ ಮುಗಿಸಿ ಮನೆಗೆ ಮರಳಿದ್ದರು. ಮುಂಜಾನೆ ಸುಮಾರು 5.30ಕ್ಕೆ ತೀವ್ರ ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮೃತರು ಪತ್ನಿ ಹಾಗೂ ಮೂವರು ಗಂಡು ಮಕ್ಕಳನ್ನು ಅಗಲಿದ್ದಾರೆ. ಐರಾಜು ಅವರ ಅಕಾಲಿಕ ನಿಧನಕ್ಕೆ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.

ಮೊದಲ ಪುಟದಿಂದ

### ಬೆಂಕಿ ಅವಘಡ; 6 ಜನರಿಗೆ ಗಾಯ

ಕಾರಣ ಪ್ರಸ್ತುತ ತಿಳಿದಿಲ್ಲ. ದೆಹಲಿ ಪೊಲೀಸರ ಪ್ರಕಾರ, ಸ್ವರೂಪ್ ನಗರದ ಲೇನ್ ಸಂಖ್ಯೆ 2 ರಲ್ಲಿರುವ ಕಾರ್ಖಾನೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಘಟನೆಯ ಬಗ್ಗೆ ಸ್ವರೂಪ್ ನಗರ ಪೊಲೀಸ್ ಠಾಣೆಯಲ್ಲಿ ವರದಿಯಾಗಿದೆ. ಪೊಲೀಸರ ಮಾಹಿತಿಯಂತೆ 357/58 ರಲ್ಲಿರುವ ಕಟ್ಟಡದ ನೆಲಮಾಳಿಗೆ ಮತ್ತು ಮೊದಲ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕಾರ್ಖಾನೆಯು ಜೂಡೋ ಬಟ್ಟೆ ಮತ್ತು ಬಾಕ್ಸಿಂಗ್ ಕೈಗವಸುಗಳನ್ನು ತಯಾರಿಸುತ್ತದೆ. ಬೆಂಕಿಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಆದಾಗ್ಯೂ, ಪಕ್ಕದ ಕಟ್ಟಡದ ಕೆಲವು ನಿವಾಸಿಗಳು ಭಯಭೀತರಾಗಿ ತಮ್ಮ ಮನೆಗಳಿಂದ ಹಾರಿದರು. ಆರು ಜನರು ಗಾಯಗೊಂಡಿದ್ದಾರೆ. ಎಲ್ಲರನ್ನೂ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ. ಅಗ್ನಿಶಾಮಕ ದಳದ ವಾಹನಗಳು ಸ್ಥಳದಲ್ಲಿದ್ದು, ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ.

ಮೊದಲ ಪುಟದಿಂದ

### ರಾಜ್ಯದಲ್ಲಿ 800 ಬಾಲ ಕಾರ್ಮಿಕರ ರಕ್ಷಣೆ

ವಹಿಸಿದ್ದರು. ವಾಣಿಜ್ಯ ಸಂಸ್ಥೆಗಳು, ಕೈಗಾರಿಕಾ ಪ್ರದೇಶಗಳು, ಕಾರ್ಖಾನೆಗಳು, ಅಂಗಡಿಗಳು, ಗ್ಯಾರೇಜ್‌ಗಳು, ನಿರ್ಮಾಣ ಸ್ಥಳಗಳು, ಹೋಟೆಲ್‌ಗಳು, ಪೆಟ್ರೋಲ್ ಬಂಕ್‌ಗಳು, ಮಾಲ್‌ಗಳು ಮತ್ತು ಇತರ ಸಂಸ್ಥೆಗಳು ಸೇರಿದಂತೆ ಮಕ್ಕಳು ಕೆಲಸ ಮಾಡುತ್ತಿರಬಹುದಾದ 5,897 ಸ್ಥಳಗಳಲ್ಲಿ ಪೊಲೀಸ್ ತಂಡಗಳು ಪರಿಶೀಲನೆ ಮತ್ತು ದಾಳಿ ನಡೆಸಿವೆ. ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ ಅಂಗಡಿ ಮಾಲೀಕರ ವಿರುದ್ಧ 'ಬಾಲ ಮತ್ತು ಹದಿಹರೆಯದವರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ' ಹಾಗೂ 'ಬಾಲ ನ್ಯಾಯ ಕಾಯ್ದೆ'ಯಡಿ ಹದಿನೆಂಟು ಪ್ರಕರಣಗಳನ್ನು ದಾಖಲಿಸಲಾಗಿದೆ. ಸೆಪ್ಟೆಂಬರ್ 8 ರಂದು ಮುಖ್ಯಮಂತ್ರಿಗಳು ಎಪಿಎಂಸಿ ಮಾರುಕಟ್ಟೆಗೆ ಮುಂಜಾನೆ ಭೇಟಿ ನೀಡಿದ ನಂತರ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಅವರು ರೈತರು, ಕಾರ್ಮಿಕರು ಮತ್ತು ವ್ಯಾಪಾರಿಗಳೊಂದಿಗೆ ಸಂವಾದ ನಡೆಸಿ ಅವರ ಅಹವಾಲುಗಳನ್ನು ಆಲಿಸಿದ್ದರು. ಮಾರುಕಟ್ಟೆಯಲ್ಲಿ ಮಕ್ಕಳು ಕೆಲಸ ಮಾಡುತ್ತಿರುವುದನ್ನು ಗಮನಿಸಿದ ಅವರು, ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು ಮತ್ತು ಮಕ್ಕಳನ್ನು ರಕ್ಷಿಸಲು ಪೊಲೀಸ್ ಹಾಗೂ ಇತರ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

### ತೊಂದರೆ ಆದರೂ ನಾನು ಬರ್ತೀನಿ

ರೌಡಿಗಳಾ ಎಂದು ಪ್ರಶ್ನಿಸಿದರು. ಡಿಕೆ ಶಿವಕುಮಾರ್ ಚುನಾವಣೆ ಬಂದ ತಕ್ಷಣ ದೇವಸ್ಥಾನಗಳಿಗೆ ಹೋಗ್ತಾರೆ, ಕುಂಕುಮ ಹಾಕ್ತಾರೆ, ನದೀಲಿ ಮುಳುಗ್ತಾರೆ. ನಾನೂ ದೊಡ್ಡ ಹಿಂದೂ ಅಂತ ಬಿಂಬಿಸಿಕೊಳ್ತಾರೆ. ಇದೇನಾ ನಿಮ್ಮ ಹಿಂದೂ ಕಾಳಜಿ? ಭಕ್ತಾದಿಗಳಿಗೆ ಧಮಕಿ ಹಾಕೋದೇ ಕರ್ನಾಟಕ ಮಾಡೆಲ್ಲಾ? ಚುನಾವಣೆ ಬಂದಾಗ ಮಾತ್ರ ಕಪಟ ಹಿಂದುತ್ವ ತೋರುತ್ತೀರಾ ಎಂದು ಪ್ರಶ್ನಿಸಿದರು.

# ಸುಬ್ಬಣ್ಣರ ಆದರ್ಶನ ಮುಂದಿನ ಪೀಳಿಗೆಗೆ ತಲುಪಿಸಿ

**ಮೈಸೂರು:** ಟಿ.ಎಸ್.ಸುಬ್ಬಣ್ಣರ ಸ್ಮರಣೆ ಮಾಡಿದರಷ್ಟೇ ಸಾಲದು ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೂ ತಲುಪಿಸುವ ಕೆಲಸ ಆಗಬೇಕೆಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ನಗರದ ವಿದ್ಯಾರಣ್ಯಪುರಂನ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆಯಲ್ಲಿ ಸಂಸ್ಥೆಯ ಸಂಸ್ಥಾಪಕ ಸ್ವಾತಂತ್ರ್ಯ ಹೋರಾಟಗಾರ ಟಿ.ಎಸ್.ಸುಬ್ಬಣ್ಣನವರ ಸಂಸ್ಮರಣೆ ದಿನದ ಅಂಗವಾಗಿ ನಡೆದ ನೂತನ ಭೋಜನಾಲಯದ ಉದ್ಘಾಟಿಸಿ ಮಾತನಾಡಿದರು. ಬಡವರು, ದಲಿತರು ಹಾಗೂ ಹಿಂದುಳಿದ ವರ್ಗಗಳ ಮಕ್ಕಳ ಶಿಕ್ಷಣ ಮತ್ತು ಭವಿಷ್ಯಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟಿದ್ದ ಟಿ.ಎಸ್. ಸುಬ್ಬಣ್ಣ ಅವರಂತಹ ಮಹಾನ್ ಚೇತನರ ಜೀವನ ಇಂದಿನ ಯುವಜನತೆಗೆ ಆದರ್ಶವಾಗಬೇಕು. ಸ್ವಾತಂತ್ರ್ಯ ಪೂರ್ವದಲ್ಲೇ ಸುಬ್ಬಣ್ಣ ಅವರು ಹಲವು ಕಡೆ ವಿದ್ಯಾರ್ಥಿ ನಿಲುವುಗಳನ್ನು ಸ್ಥಾಪಿಸಿ, ಬಡಮಕ್ಕಳ ಶಿಕ್ಷಣಕ್ಕೆ ನೆರವಾದರು. ತಮ್ಮ ಸಂಪತ್ತು ಹಾಗೂ ಶಕ್ತಿಯನ್ನು ಸ್ವಂತ ಬದುಕಿನ ಸುಖಕ್ಕಾಗಿ ಬಳಸದೆ ಸಮಾಜದ ಏಳಿಗೆಗಾಗಿ ವಿನಿಯೋಗಿಸಿದ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು.

ಸುಬ್ಬಣ್ಣ ಸುಮಾರು 10–11 ಕಡೆ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಸಾವಿರಾರು ಮಕ್ಕಳ ಭವಿಷ್ಯ ರೂಪಿಸಲು ಕಾರಣರಾಗಿದ್ದಾರೆ. ಇಂದಿನ ದಿನಗಳಲ್ಲಿ ಅವಕಾಶ ಮತ್ತು ಸಂಪತ್ತು ದೊರೆತ ತಕ್ಷಣ ಮನೆ, ಕಟ್ಟಡ, ಜಮೀನು ಹಾಗೂ ಆಸ್ತಿಪಾಸ್ತಿ ಮಾಡಿಕೊಳ್ಳುವವರನ್ನು ನೋಡುತ್ತಿದ್ದೇವೆ. ಆದರೆ ಸುಬ್ಬಣ್ಣ ಅವರು ತಮ್ಮ ಜೀವನವನ್ನು ಬಡಮಕ್ಕಳ ಶಿಕ್ಷಣಕ್ಕಾಗಿ ಮೀಸಲಿಟ್ಟಿದ್ದರು ಎಂದು ಹೇಳಿದರು. ಮಾಜಿ ಶಾಸಕ ಆದ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆಯ ಅಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಪ್ರೊ.ಜಿ.ಸಿ.ರಾಜಣ್ಣ, ಖಜಾಂಚಿ ಡಾ.ಪಿ.ಎಸ್.ಹರೀಶ್, ಧರ್ಮದರ್ಶಿ ಬಿ.ಸುವರ್ಣದೇವಿ ಇನ್ನಿತರರು ಹಾಜರಿದ್ದರು.



---

ಎಂ.ಲಕ್ಷ್ಮಣ್ ಒತ್ತಾಯ

# ಪ್ರತಾಪಸಿಂಹ ವಿರುದ್ಧ ಎಫ್‌ಐಆರ್ ದಾಖಲಿಸಿ

ಮೈಸೂರು: ತಿ.ನರಸೀಪುರ ಪೊಲೀಸ್ ಠಾಣೆಗೆ ನುಗ್ಗುವುದಾಗಿ ಧಮ್ಕಿ ಹಾಕಿರುವ ಮಾಜಿ ಸಂಸದ ಪ್ರತಾಪಸಿಂಹ ವಿರುದ್ಧ ಎಫ್‌ಐಆರ್ ದಾಖಲಿಸಬೇಕೆಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಭವನದಲ್ಲಿ ರವಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಎಚ್ಚರಿಕೆ ಕೊಟ್ಟಿರುವ ಪ್ರತಾಪಸಿಂಹ ವಿರುದ್ಧ ಕ್ರಮಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರಿಗೆ ಒತ್ತಾಯಿಸಿದ್ದೇನೆ. ಈ ಸಂಬಂಧ ಗೃಹ ಮಂತ್ರಿ ಪ್ರಿಯಾಂಕ್ ಖರ್ಗೆ ಅವರಿಗೂ ಮನವಿ ಮಾಡುತ್ತೇನೆ ಎಂದು ಹೇಳಿದರು. ಕಳೆದ ವರ್ಷ ಗಣೇಶೋತ್ಸವದ ವೇಳೆ ಮಸೀದಿ ಮುಂದೆ ಕಲ್ಲು ತೂರಾಟ ಮಾಡಿ ಗೊಂದಲ ಸೃಷ್ಟಿಸಲಾಗಿತ್ತು. ಈ ಸಂಬಂಧ ಎಚ್ಚ ರಿಕೆ ಕೊಟ್ಟಿರುವುದನ್ನು ತಪ್ಪು ಎಂದು ಬಿಂಬಿಸುತ್ತ ಠಾಣೆ ಎದುರು ಪ್ರತಿಭಟನೆ ನಡೆಸುವುದು, ಅಧಿಕಾರಿಗಳಿಗೆ ಧಮ್ಕಿ ಹಾಕುವುದು ನಾಚಿಕೆಗೇಡು. ಹಿಂದೂ ಹಬ್ಬವನ್ನು ಪ್ರಿಯಾಂಕ್ ಖರ್ಗೆ ತಡೆಯು ತ್ತಿದ್ದಾರೆಂದು ಬಿಂಬಿಸುವುದು ದುರಂತ. ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ತಿ.ನರ ಸೀಪುರದ ಠಾಣೆ ಭೇಟಿ ನೀಡಿ ಪ್ರತಿಭಟನೆ ಮಾಡುತ್ತಿದ್ದಾರೆ. ಇದೇ ಪೌರುಷವನ್ನು ಕೇಂದ್ರ ದಿಂದ ಅನುದಾನ ತರಲು ಯಾಕೇ ಬಳಸಬಾ ರದು? ಕೋಮು ಗಲಭೆ ಸೃಷ್ಟಿಸಲು ಅಶೋಕ್ ನರಸೀಪುರಕ್ಕೆ ಬಂದಿದ್ದಾರೆಯೇ? ಎಂದು ಲಕ್ಷ್ಮಣ್ ಪ್ರಶ್ನಿಸಿದರು.

2028ರ ಚುನಾವಣೆ ಗೆಲ್ಲಲು 2026ರಿಂದಲೇ ಕೋಮು ಗಲಭೆ ಸೃಷ್ಟಿಸಲು ಮುಂದಾಗಿದ್ದಾರೆ. ಶೂದ್ರರು, ದಲಿತರು ಬಿಜೆಪಿ ನಾಯಕರ ಮಾತಿಗೆ ಬಲಪಶುಗಳಾಗಬೇಡಿ. ಹಿಂದೂಗಳನ್ನು ಬಿಜೆಪಿಯವರು ಗುತ್ತಿಗೆ ತೆಗೆದುಕೊಂಡಿದ್ದಾರ? ಎಂದರು. 2018ರಿಂದ 2023ರವರೆಗೆ 188 ಮೇಜರ್ ಕಮ್ಯುನಲ್, ಸಾಮಾನ್ಯ 928 ಪ್ರಕರಣಗಳು ದಾಖಲಾಗಿವೆ. 2023ರಿಂದ ಇಲ್ಲಿಯವರೆಗೆ 7 ಮೇಜರ್, 17 ಸಾಮಾನ್ಯ ಕೋಮು ಗಲಭೆ ಪ್ರಕರಣಗಳು ದಾಖಲಾಗಿವೆ. ಲೋಕೋಪಯೋಗಿ ಸಚಿವ ಸತೀಶ್ ಜಾರಿಕಹೊಳಿ ನಿವಾಸದ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ದಾಳಿಗೆ ಆಕ್ಷೇಪ ವ್ಯಕ್ತಪಡಿಸಿದ ಎಂ. ಲಕ್ಷ್ಮಣ್, ಬಿಜೆಪಿ ನಾಯಕರ ಮೇಲೆ ಯಾಕೇ ದಾಳಿ ಮಾಡುವುದಿಲ್ಲ. ವಿದೇಶಿ ವಿನಿಮಯ ಕಾಯಿದೆ ಉಲ್ಲಂಘನೆ ಮಾಡಿ ವಿದೇಶದಲ್ಲಿ ಹಣ ಹೂಡಿಕೆ ಮಾಡಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಒಂದೇ ದಿನದಲ್ಲಿ ಅವರಿಗೆ ಮಾಹಿತಿ ದೊರೆಯಿತೇ? ಮನಿ ಲಾಂಡ್ರಿಂಗ್ ಆ?ಯಕ್ಟ್ ನಲ್ಲಿ ನೀಡಿರುವ ಅಧಿಕಾರವನ್ನು ಬಳಸಿರುವುದು ತಪ್ಪೇ ಎಂದರು.




ದಲಿತರನ್ನು ಕಂಡರೆ ಬಿಜೆಪಿ ನಾಯಕರಿಗೆ ಆಗುವುದಿಲ್ಲ. ಕಂದಾಯ, ಲೋಕೋಪಯೋಗಿ, ಗೃಹ ಖಾತೆಗಳನ್ನು ಹೊಂದಿರುವುದನ್ನು ಸಹಿಸದೇ ತಿರುಗಿ ಬಿದಿದ್ದಾರೆ. ಇನ್ನೂ ಮೂವರ ಮೇಲೆ ದಾಳಿ ನಡೆಯುವ ಮಾಡುವ ಸಾಧ್ಯತೆಗಳಿವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ಮುಖಂಡರುಗಳಾದ ಎಂ.ಶಿವಣ್ಣ, ಬಿ.ಎಂ. ರಾಮು, ದ್ಯಾವಪ್ಪ ನಾಯಕ, ಮಾಧ್ಯಮ ವಕ್ತಾರ ಎಂ.ಮಹೇಶ್ ಉಪಸ್ಥಿತರಿದ್ದರು.

## ಶ್ರೀ ರಾಜೇಂದ್ರಸ್ವಾಮಿಗಳ ಜನ್ಮ ದಿನೋತ್ಸವ ಕಾರ್ಯಕ್ರಮ



ಚಾಮರಾಜನಗರ, ಸುತ್ತೂರು ಶ್ರೀಕ್ಷೇತ್ರದ ಲಿಂಗೈಕ್ಯ ಶ್ರೀ ರಾಜೇಂದ್ರಶ್ರೀಗಳು ಶೈಕ್ಷಣಿಕ ಪ್ರಗತಿಗಾಗಿ ಕ್ರಾಂತಿ ಮಾಡಿದ ಪರಿಣಾಮ ಹಳೇ ಮೈಸೂರು ಭಾಗದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಶ್ರೀಗಳು ವಸತಿ ಸಹಿತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದರು ಎಂದು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರು ಅದ ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ತಿಳಿಸಿದರು.

ನಗರದ ಮಹಾಮನೆಯಲ್ಲಿ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆದ ಶ್ರೀ ರಾಜೇಂದ್ರಸ್ವಾಮಿಗಳ 111ನೇ ಜನ್ಮ ದಿನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶ್ರೀಗಳು ಕೇವಲ ಧಾರ್ಮಿಕವಾಗಿ ಮಠವನ್ನು ಮುನ್ನಡೆಸಲಿಲ್ಲ. ಎಲ್ಲಾ ವರ್ಗದವರಿಗೆ ಸಮಾನವಾದ ಶಿಕ್ಷಣನ್ನು ಕೊಡುವ ನಿಟ್ಟಿನಲ್ಲಿ ಪ್ರಾಮಾಣ ಕ ಪ್ರಯತ್ನ ಮಾಡಿದರು. ಹಾಸ್ಟೆಲ್‌ಗಳನ್ನು ಆರಂಭಿಸಿ, ಧರ್ಮಾತೀತಿ, ಜಾತ್ಯತೀತವಾಗಿ ಎಲ್ಲರಿಗೂ ಅವಕಾಶ ಮಾಡಿಕೊಟ್ಟರು. ಇದರ ಪರಿಣಾಮ ನಮ್ಮ ಭಾಗದಲ್ಲಿ ಸ್ವಾತಂತ್ರ್ಯ ಪೂರ್ವ ಹಾಗೂ ನಂತರ ಶೈಕ್ಷಣ ಕ ಪ್ರಮಾಣ ಹೆಚ್ಚಾಯಿತು ಎಂದರು.

ಶ್ರೀಗಳು ಚಿಕ್ಕವಯಸ್ಸಿನಲ್ಲೇ ಮಠಾಧೀಪತಿಯಾದವರು. ತಮ್ಮ ಓದಿನ ಜೊತೆಗೆ ಮಠವನ್ನು ಮುನ್ನಡೆಸಿದರು. ಜೊತೆಗೆ ವಿದ್ಯಾರ್ಥಿಗಳ ಭಾವನೆ ಅವರಿಗೆ ಅರ್ಥವಾಗಿತ್ತು. ಸದಾ ಮಕ್ಕಳೊಂದಿಗೆ ಹೆಚ್ಚು ಸಮಯ ನೀಡುತ್ತಿದ್ದ ಅವರು, ತಾವೇ ಪಂಕ್ತಿಯಲ್ಲಿ ಊಟ ಬಡಿಸುತ್ತಿದ್ದರು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ತುಪ್ಪವನ್ನು ಹೆಚ್ಚು ಹಾಕುವ ಮೂಲಕ ಅವರ ಕಲಿಕೆಗೆ ಪ್ರೋತ್ಸಾಹ ನೀಡುತ್ತಿದ್ದರು. ಎಲ್ಲ ಮಕ್ಕಳು ಸಮಾನವಾಗಿ ಓದಬೇಕು ಎಂಬ ಆಶಯ ಅವರದಾಗಿತ್ತು.

ಮೈಸೂರು ಮಹಾರಾಜರು ನೀಡಿದ್ದ ಜಯ ಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ನಿರ್ವಹಣೆ ಮಾಡುವುದು ಶ್ರೀಗಳಿಗೆ ಕಷ್ಟ ಸಾಧ್ಯವಾಗಿತ್ತು. ಒಂದು ಹಂತದಲ್ಲಿ ಕಾಲೇಜನ್ನು ಸರ್ಕಾರಕ್ಕೆ ವಾಪಸ್ ನೀಡುವ ನಿರ್ಧಾರವನ್ನು ರಾಜೇಂದ್ರಶ್ರೀಗಳು ಮಾಡಿ ಬಿಟ್ಟಿದ್ದರು. ಆದರೆ, ಅಂದು ಶಾಸಕರಾಗಿದ್ದ ದಿ. ಎಂ.ಸಿ. ಬಸಪ್ಪ ಅವರು ಶ್ರೀಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದವರು. ಯಾವುದೇ ಕಾರಣಕ್ಕು ಸರ್ಕಾರಕ್ಕೆ ವಾಪಸ್ ಕೊಡುವುದು ಬೇಡ. ನಾನು ಸರ್ಕಾರದ ಅನುದಾನಕ್ಕೆ ಸೇರಿಸುತ್ತೇನೆ ಎಂದು ಅಂದಿನ ಶಿಕ್ಷಣ ಸಚಿವರು ಹಾಗೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಒಂದೇ ದಿನದಲ್ಲಿ ಆದೇಶ ಮಾಡಿಸಿಕೊಂಡು ಬಂದು ಮೈಸೂರಿನಲ್ಲಿ ಇಂಜಿನಿಯರಿಂಗ್ ಕಾಲೇಜು ಮಠದಲ್ಲಿಯೇ ಉಳಿಯುವಂತೆ ಮಾಡಿದ್ದರು. ರಾಜೇಂದ್ರಶ್ರೀಗಳ ಶ್ರಮದ ಫಲವಾಗಿ ಇಂದು ಸಂಸ್ಥೆ ಉತ್ತಮ ವಾಗಿ ಮುನ್ನಡೆಯುತ್ತಿದೆ. ನಮ್ಮ ಮಠದಿಂದ ಕಲಿತರು ಸಮಾಜಕ್ಕೆ ಒಳ್ಳೆಯದನ್ನು ಮಾಡಿದರೆ ಅಷ್ಟೇ ಸಾಕು ಎಂಬ ಭಾವನೆಯನ್ನು ಹೊಂದಿದ್ದರು ಎಂದು ಶ್ರೀಗಳ ಸೇವೆಯ ಬಗ್ಗೆ ಗುಣಗಾನ ಮಾಡಿದರು.

ಮುಡುಗನಪುರದ ಹಲವಾರು ಮಠಾಧ್ಯಕ್ಷರಾದ ಶ್ರೀ ಷಡಕ್ಷರಿ ದೇಶಿಕೇಂದ್ರಸ್ವಾಮೀಜಿ ಅವರು ರಾಜೇಂದ್ರಶ್ರೀಗಳ ಮಾತೃ ಹೃದಯಿಯಾಗಿದ್ದರು. ಅವರ ಶ್ರೀಮಠದ ಬೆಳವಣ ಗೆ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅವರೊಂದಿಗಿನ ಅನೇಕ ಪ್ರಸಂಗಳನ್ನು ಹೇಳುವ ಮೂಲಕ ಶ್ರೀಗಳ ಸ್ಮರಣೆ ಮಾಡಿದರು.

ಕಾರ್ಯಕ್ರಮದಲ್ಲಿ ಕಸಾಪ ಮಾಜಿ ಅಧ್ಯಕ್ಷ ಬಿ.ಎಸ್. ವಿನಯ್, ಜೆಎಸ್‌ಎಸ್ ಪಿಆರೋ ಆರ್.ಎಂ.ಸ್ವಾಮಿ, ಸಂಘ ಅಧ್ಯಕ್ಷ ಸಿದ್ದಮಲ್ಲಪ್ಪ, ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗೌರಿ ಶಂಕರ್, ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದ ಉಪಾಧ್ಯಕ್ಷ ಸುಂದರ್, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ವಸಂತಮ್ಮ, ಉಪಾಧ್ಯಕ್ಷ ಮಹದೇವಸ್ವಾಮಿ ಐಟಿಐ, ಖಜಾಂಚಿ ಕೊತ್ತಲವಾಡಿ ಮಹದೇವಸ್ವಾಮಿ, ಮೊದಲಾಧವರು ಭಾಗವಹಿಸಿದ್ದರು.

## ಗೌರಿ ಗಣಪತಿ ಹಬ್ಬವನ್ನು ಶಾಂತಿ, ಸೌಹಾರ್ಧತೆ, ಭಾವೈಕ್ಯತೆಯಿಂದ ಆಚರಿಸಿ

### ಪೊಲೀಸ್ ಇಲಾಖೆ ಮನವಿ

- ಜಿಲ್ಲಾದ್ಯಂತ 800ಕ್ಕೂ ಹೆಚ್ಚು ಪೊಲೀಸರ ನಿಯೋಜನೆ
- ಸಿಸಿ ಕ್ಯಾಮರಾ, ಡ್ರೋಣ್ ಕ್ಯಾಮರಾ ಬಳಕೆ

ರಾಮನಗರ: ಗೌರಿ ಮತ್ತು ಗಣೇಶ ಹಬ್ಬವನ್ನು ಜಿಲ್ಲಾದ್ಯಂತ ನಾಗರೀಕರು ಶಾಂತಿ, ಸೌಹಾರ್ದತೆ ಮತ್ತು ನೆಮ್ಮದಿಯಿಂದ ಆಚರಿಸಲು ಅನುವಾಗುವಂತೆ ಜಿಲ್ಲಾ ಪೊಲೀಸರು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದಾರೆ.

ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಗಣೇಶ ಹಬ್ಬವನ್ನು ಆಚರಿಸುವ ಉದ್ದೇಶದಿಂದ ಪೊಲೀಸರು ವ್ಯಾಪಕ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದಾರೆ.

ಜಿಲ್ಲೆಯಲ್ಲಿ ಸಾವಿರಕ್ಕೂ ಹೆಚ್ಚು ಗಣೇಶ ಮೂರ್ತಿಗಲನ್ನು ಪ್ರತಿಷ್ಠಾಪಿಸಲಾಗುತ್ತಿದೆ. ಜೊತೆಯಲ್ಲಿ ಮೂರ್ತಿಗಳ ವಿಸರ್ಜನೆ, ಮೆರವಣಿಗೆ ವೇಳೆಯೂ ಜಿಲ್ಲೆಯಲ್ಲಿ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಜಿಲ್ಲಾ ಪೊಲೀಸ್ ಇಲಾಖೆ ಜಿಲ್ಲಾದ್ಯಂತ 800ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ, 450 ಗೃಹರಕ್ಷಕ ದಳದ ಸಿಬ್ಬಂದಿಗಳು, 4 ಕೆ.ಎಸ್.ಆರ್.ಪಿ ಹಾಗೂ 10 ಡಿ.ಎ.ಆರ್ ತುಕಡಿಗಳನ್ನು ನಿಯೋಜಿಸಲಾಗಿದೆ.

ಪೊಲೀಸರು ನಿರಂತರ ಗಸ್ತು ಮತ್ತು ನಿಗಾ ವ್ಯವಸ್ಥೆ ಕೈಗೊಂಡಿದ್ದಾರೆ. 1286 ಕಡೆಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಆಯ್ದ ಕಡೆಗಳಲ್ಲಿ ಡ್ರೋನ್ ಕ್ಯಾಮರಾಗಳನ್ನು ನಿಯೋಜನೆ ಮಾಡಲು ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ 19 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮತ್ತು ಉಪ ವಿಭಾಗದ ವ್ಯಾಪ್ತಿಗಳಲ್ಲಿ ಶಾಂತಿ ಹಾಗೂ ಕುಂದು ಕೊರತೆ ಸಭೆಗಳನ್ನು ನಡೆಸಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಮಟ್ಟದಲ್ಲಿಯೂ ಸಭೆ ನಡೆಸಲಾಗಿದೆ. ವರಿಷ್ಠಾಧಿಕಾರಿಗಳು ತಮ್ಮ ಇಲಾಖೆಯ ಅಧಿಕಾರಿಗಳು ಸೇರಿದಂತೆ ವಿವಿಧ ಸರ್ಕಾರಿ ಇಲಾಖಾಧಿಕಾರಿಗಳೊಂದಿಗೆ ಸಭೆ ನಡೆಸಿ ಎಲ್ಲ ಮಾಹಿತಿ, ಸಲಹೆಗಳನ್ನು ಪಡೆದುಕೊಂಡಿದ್ದಾರೆ.

### ಪೊಲೀಸ್ ಇಲಾಖೆಯ ಮನವಿ, ಸೂಚನೆ, ಎಚ್ಚರಿಕೆ

ಎಲ್ಲ ನಾಗರೀಕರು ಶಾಂತಿ ಮತ್ತು ಸೌಹಾರ್ಧತೆಯಿಂದ ಹಾಗೂ ಭಾವೈಕ್ಯತೆಯಿಂದ ಹಬ್ಬವನ್ನು ಆಚರಿಸಬೇಕು. ಧ್ವನಿವರ್ಧಕಗಳ ಬಳಕೆ, ಮೆರವಣಿಗೆ ಸಂದರ್ಭದಲ್ಲಿ ಸರ್ಕಾರದ ನಿಯಮಾವಳಿಗಳನ್ನು ಪಾಲಿಸಬೇಕು. ಗಣೇಶ ಮೂರ್ತಿ ಪ್ರತಿಷ್ಠಾಪಿಸುವ ಸ್ಥಳದಲ್ಲಿ ಸಿಸಿ ಕ್ಯಾಮರ ಅಳವಡಿಸುವುದು, ಜವಾಬ್ದಾರಿಯುತ ವ್ಯಕ್ತಿಯನ್ನು ನೇಮಕ ಮಾಡುವುದು ಪ್ರತಿಷ್ಠಾಪನಾ ಸಮಿತಿಯ ಹೊಣೆಯಾಗಿದೆ. ಪ್ರಚೋಧನಕಾರಿ ಘೋಷಣೆಗಳು, ಕೋಮು ಸೌಹಾರ್ಧತೆಗೆ ಧಕ್ಕೆ ತರುವ ಚಟುವಟಿಕೆಗಲು ಹಾಗೂ ಕಾನೂನು ಬಾಹೀರ ಕೃತ್ಯಕಗಳಿಗೆ ಅವಕಾಶ ನೀಡಬಾರದು. ಮೆರವಣಿಗೆ ಸಂದರ್ಭದಲ್ಲಿ ಸಾರ್ವಜನಿಕರು ಪೊಲೀಸ್ ಸಿಬ್ಬಂದಿಯೊಂದಿಗೆ ಸಹಕರಿಸಬೇಕು. ಪೂರ್ವ ನಿರ್ಧರಿತ ಮಾರ್ಗವನ್ನು ಮಾತ್ರ ಅನುಸರಿಸಬೇಕು. ಯಾವುದೇ ಕಾರಣಕ್ಕೂ ಮಾರ್ಗ ಬದಲಾವಣೆಗೆ ಅವಕಾಶ ನೀಡುವುದಿಲ್ಲ ಎಂದು ಪೊಲೀಸ್ ಇಲಾಖೆ ಸ್ಪಷ್ಟ ಪಡಿಸಿದೆ. ಸಾಮಾಜಿಕ ಜಾಲ ತಾಣಗಲಲ್ಲಿ ಸುಳ್ಳು ಸುದ್ದಿ, ವದಂತಿ ಅಥವಾ ಪ್ರಚೋಧನಾಕಾರಿ ಸಂದೇಶಗಳನ್ನು ಹಂಚಿಕೊಳ್ಳಬಾರದು, ಹಾಗೊಮ್ಮೆ ಇಂತಹವುಗಳಿಗೆ ಕಾರಣರಾದವರ ವಿರುದ್ದ ಕಾನೂನು ಕ್ರಮಗಳನ್ನು ಕೈಗೊಳ್ಳುವುದಾಗಿ ಇಲಾಖೆ ಎಚ್ಚರಿಸಿದೆ.

ಕೆರೆ, ನದಿ ಅಥವಾ ಇತರೆ ಜಲಮೂಲಗಲಲ್ಲಿ ಗಣಪತಿ ಮೂರ್ತಿಯನ್ನು ವಿಸರ್ಜನೆ ಮಾಡುವಾಗ ಎಲ್ಲ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು. ಮೆರವಣಿಗೆ ವೇಳೆ ಅಪಾಯಕಾರಿ ವಸ್ತುಗಳನ್ನು ಬಳಸಬಾರದು ಎಂದು ಪೊಲೀಸ್ ಇಲಾಖೆ ನಾಗರೀಕರಲ್ಲಿ ಮನವಿ ಮಾಡಿದೆ.

## ಸಂಘಗಳ ಕೊಡುಗೆ ಅಪಾರ



ಚಾಮರಾಜನಗರ ಬಡವರ ಏಳಿಗೆಗೆ ಸಹಕಾರ ಸಂಘಗಳ ಕೊಡುಗೆ ಅಪಾರವಾಗಿದೆ. ಎಷ್ಟೋ ಬಡವರುಯ ಮತ್ತು ಸಣ್ಣ ವ್ಯಾಪಾರಿಗಳಿಗೆ ಅನುಕೂಲವಾಗಿದೆ ಎಂದು ಸಂಗಮ ಸೌಹಾರ್ದ ಸಹಕಾರಿ ಸಂಘ ನಿಯಮಿತ ಉಪಾಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

ನಗರದ ರೋಟರಿಭವನದಲ್ಲಿ ಶನಿವಾರ ನಡೆದ 2026ನೇ ಸಾಲಿನ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಸಹಕಾರ ಸಂಘಗಳು ಬ್ಯಾಂಕ್ಗಳ ಮಾದರಿಯಲ್ಲಿ ಸಾರ್ವಜನಿಕರಿಗೆ ಸೇವೆ ನೀಡುತ್ತಾಬಂದಿದೆ. ಯಾವುದೇ ಸಹಕಾರ ಸಂಘಗಳು ಉಳಿಯ ಬೇಕಾದರೆ ಅಲ್ಲಿನ ಸದಸ್ಯರ ಪ್ರೋತ್ಸಾಹ ಬಹಳ ಇರಬೇಕು. ಸಹಕಾರ ನಿಮ್ಮ ಆಸ್ತಿ ಅದನ್ನು ಬೆಳೆಸುವುದು ಪ್ರತಿಯೊಬ್ಬ ಸದಸ್ಯರ ಕರ್ತವ್ಯವಾಗಿದೆ. ಸಹಕಾರ ಸಂಘದಲ್ಲಿ ಹಲವಾರು ಯೋಜನೆಗಳು ಇದೆ. ಠೇವಣಿ ಹಣವನ್ನು ಇಟ್ಟರೆ ಹೆಚ್ಚಿನ ಬಡ್ಡಿಯನ್ನು ಪಡೆಯಬಹುದು. ಎಸ್.ಬಿ. ಖಾತೆ, ಆರ್.ಡಿ. ಖಾತೆಗಳನ್ನು ಸದಸ್ಯರು ಮಾಡಿಸುವುದರಿಂದ ಸಹಕಾರ ಸಂಘವು ಹೆಚ್ಚು ಲಾಭ ಗಳಿಸಲು ಸಾಧ್ಯ ಎಂದರು ಕಾರ್ಯಕ್ರಮವು ಸಹಕಾರ ಸಂಘಗಳ ನಿಯಮದ ಮಾದರಿಯಲ್ಲಿ ನಡೆಯಿತು ಈ ಸಂದರ್ಭದಲ್ಲಿಸಹಕಾರ ಸಂಘದ ನಿರ್ದೇಶಕರುಗಳಾದ ಮಹೇಶ್.ಎಂ, ರಶ್ಮಿ, ವಿಶ್ವನಾಥ ಎನ್, ಪ್ರಭುಸ್ವಾಮಿ.ಸಿ.ಕೆ, ಸಿ.ಬಿ.ನಾಗರಾಜು, ನಳಿನಿ, ಸಿದ್ದಮಲ್ಲಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಮ್ಯ. ಹೆಚ್.ಎಸ್ ಹಾಗೂ ಖಜಾಂಚಿ ಲಾವಣ್ಯ ಉಪಸ್ಥಿತರಿದ್ದರು.

## ಬೆಲೆ ಏರಿಕೆ ನಡುವೆ ಖರೀದಿ ಭರಾಟೆ



ಚಾಮರಾಜನಗರ: ಗೌರಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಹಬ್ಬದ ಮುನ್ನಾ ದಿನವಾದ ಭಾನುವಾರ ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು, ಹನೂರು, ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಯಲ್ಲಿ ಮಾರುಕಟ್ಟೆಗೆ ತೆರಳಿದ ಜನರು ಗೌರಿ ಗಣೇಶ ಮೂರ್ತಿಗಳು, ಹೂವು, ಹಣ್ಣು ಪೂಜಾ ಸಾಮಾಗ್ರಿ ಸೇರಿದಂತೆ ಅಗತ್ಯ ವಸ್ತುಗಳನ್ನು ಖರೀದಿ ಮಾಡಿದರು.

### ಗೌರಿ,ಗಣೇಶ ಮೂರ್ತಿ ಖರೀದಿ

ಗೌರಿ ಗಣೇಶ ಹಬ್ಬದ ಪ್ರಮುಖ ಆಕರ್ಷಣೆ ಗಣೇಶ ಮೂರ್ತಿ ಪ್ರತಿಷ್ಠಾಪನೆ ಈ ಹಿನ್ನೆಲೆಯಲ್ಲಿ ಮಾರುಕಟ್ಟೆಗಳಲ್ಲಿ ಗೌರಿ ಮಳಿಗೆಗಳನ್ನು ತೆರೆದಿದ್ದು ಯುವಕರು. ಮಹಿಳೆಯರು ಗೌರಿ ಗಣೇಶ ಮೂರ್ತಿಗಳನ್ನು ಖರೀದಿಸಿದರು. 50 ರೂ.ಗಳಿಂದ 10 ಸಾವಿರ ತನಕ ಮೂರ್ತಿಗಳ ಬೆಲೆ ನಿಗದಿಯಾಗಿದ್ದು ಗೌರಿ ಗಣೇಶ ಮೂರ್ತಿಗಳನ್ನು ಖರೀದಿಸಿ ಕೊಂಡೊಯ್ದರು.

### ಹೂವು, ಹಣ್ಣು, ಬಟ್ಟೆ ಖರೀದಿ

ಹಬ್ಬಕ್ಕೆ ಅಗತ್ಯವಾದ ಹೂವು, ಹಣ್ಣು, ಆಲಂಕಾರಿಕ ವಸ್ತುಗಳು ಹಾಗೂ ಬಟ್ಟೆಗಳನ್ನು ಜನರು ಖರೀದಿಸಿದರು. ಮಲ್ಲಿಗೆ, ಮಲ್ಲೆ, ಚೆಂಡು ಹೂವು, ಹಾರಗಳ ಖರೀದಿಯೂ ಹಣ್ಣುಗಳನ್ನು ಜನರು ಖರೀದಿ ಮಾಡಿದರು. ಅಲ್ಲದೇ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಬೇಕಾದ ಅಲಂಕಾರಿಕ ವಸ್ತುಗಳನ್ನು ಯುವಕರು ಖರೀದಿಸಿದರು. ಅಲ್ಲದೇ ಮಕ್ಕಳು, ಮಹಿಳೆಯರು ಹೊಸ ಬಟ್ಟೆ ಖರೀದಿಯಲ್ಲಿ ತೊಡಗಿದ್ದರು. ಅಂಗಡಿ ಬೀದಿಯಲ್ಲಿ ಜನಸಂದಣಿ ಕಂಡುಬಂತು.

# ಬೆಲೆ ಏರಿಕೆ ನಡುವೆಯೂ ಹಬ್ಬ ಜೋರು

## ಗಜಪಡೆಗೆ ವಿಶೇಷಪೂಜೆ, ನೂರಾರು ಗಣೇಶಮೂರ್ತಿಗಳ ಪ್ರತಿಷ್ಠಾಪನೆ

ಮೈಸೂರು: ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಗೌರಿ ಗಣೇಶ ಹಬ್ಬದ ಸಂಭ್ರಮ ಈ ಬಾರಿ ಕಳೆಗಟ್ಟಿದ್ದು, ಸಾರ್ವಜನಿಕರಲ್ಲಿ ಸಡಗರ ಮನೆ ಮಾಡಿದೆ. ಈ ವರ್ಷ ವಿಶೇಷವಾಗಿ ಸೋಮವಾರದಂದು ಗೌರಿ ಮತ್ತು ಗಣೇಶ ಹಬ್ಬಗಳು ಒಟ್ಟಿಗೆ (ಒಂದೇ ದಿನ) ಬಂದಿರುವುದು ಹಬ್ಬದ ಆಚರಣೆಗೆ 'ಡಬಲ್ ಧಮಾಕಾ' ತಂದಿದೆ. ಮಾರುಕಟ್ಟೆಗಳಲ್ಲಿ ಖರೀದಿ ಭರಾಟೆ ಜೋರಾಗಿದ್ದು, ನಗರದಾದ್ಯಂತ ಹಬ್ಬದ ವಾತಾವರಣ ಒಂದು ದಿನ ಮುಂಚಿತವಾಗಿಯೇ ನಿರ್ಮಾಣವಾಗಿದೆ.

ಹಿಂದೂಗಳ ಪವಿತ್ರ ಹಬ್ಬಗಳಲ್ಲಿ ಗೌರಿ ಗಣೇಶ ಹಬ್ಬವೂ ಒಂದಾಗಿದೆ. ಅದರಲ್ಲೂ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಾನಾ ರೀತಿಯಲ್ಲಿ ಗಣೇಶ ಹಬ್ಬವನ್ನು ಆಚರಿಸುವುದು ವಾಡಿಕೆಯಾಗಿದೆ. ಕೆಲವು ನಗರಪಾಲಿಕೆ ಮಾಜಿ ಸದಸ್ಯರು ತಮ್ಮ ವಾರ್ಡಿನ ಪೌರ ಕಾರ್ಮಿಕರಿಗೆ ಸೀರೆ, ಬೆಳೆಯ ಬಾಗಿನ ನೀಡಿ ಗೌರಿ ಹಬ್ಬದ ಶುಭಾಶಯ ಕೋರುತ್ತಾರೆ. ಮತ್ತೊಂದೆಡೆ ನಗರದ ಕೇಂದ್ರ ಬಿಂದುವಾದ ನೂರೊಂದು ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಲಿದ್ದು, ಸಹಸ್ರ ಸಂಖ್ಯೆಯ ಭಕ್ತರು ಆಗಮಿಸುತ್ತಾರೆ. ಮಾತ್ರವಲ್ಲದೆ, ನಗರದ ವಿವಿಧ ಮೊಹಲ್ಲಾ, ಬೀದಿಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತಗಣ ಗೌರಿ, ಗಣೇಶಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ. ಕೆಲವು ಸಂಘ–ಸಂಸ್ಥೆಗಳಿಂದಲೂ ಸಹ ಗಣಪತಿಪ್ರತಿಷ್ಠಾಪನಾ ಕಾರ್ಯ ನೇರವೇರಿಸುವುದು ವಿಶೇಷವಾಗಿದೆ.





### ಬೆಲೆ ಏರಿಕೆಯ ಹೊಡೆತ

ಭಾನುವಾರದಂದೇ ನಗರದಲ್ಲಿ ಹಬ್ಬದ ಕಳೆಗಟ್ಟಿದ್ದು, ಬಹುತೇಕ ಸೀರೆ ಅಂಡಗಳು ಭರ್ತಿಯಾಗಿದ್ದವು. ಮಾರುಕಟ್ಟೆಯಲ್ಲಿ ಬಾಳೆ ಕಂದು, ಸೇವಂತಿಗೆ, ಕಾಕಡ, ಮಲ್ಲಿಗೆ ಹೂ ದರ ಗಗನಕ್ಕೇರಿತ್ತು. ಮಾತ್ರವಲ್ಲದೆ ಪೂಜಾ ಸಮಾಗ್ರಿಗಳಾದ ತೆಂಗಿನ ಕಾಯಿ, ಏಲಕ್ಕಿ ಬಾಳೆ ಹಣ್ಣು, ವಿಳೆದೆಲೆ, ಅಡಿಕೆ ಹಾಗೂ ಗಣಪತಿ ಮೂರ್ತಿ ಮುಂದೆ ಇಡುವ ನಾನಾ ಬಗೆಯ ಹಣ್ಣಿನ ದರವೂ ಸಹ ಏರಿಕೆಯಾಗಿತ್ತು. ಎಷ್ಟೇ ದರ ಏರಿಸಿದರೂ ಹಬ್ಬ ಆಚರಣೆ ಅನಿವಾರ್ಯವಾಗಿರುವ ಹಿನ್ನೆಲೆಯಲ್ಲಿ ಭಕ್ತ ಸಮೂಹ ಚೌಕಾಸಿ ನಡೆಸಿ ತಮಗೆ ಬೇಕಾದ ವಸ್ತುಗಳನ್ನು ಖರೀದಿಯಲ್ಲಿ ತೊಡಗಿದ್ದ ದೃಶ್ಯ ದೇವರಾಜ ಮಾರುಕಟ್ಟೆ, ಚಿಕ್ಕ ಮಾರುಕಟ್ಟೆ, ಅಗ್ರಹಾರ ಮಾರುಕಟ್ಟೆ ಲಲಿತ್ ಮಹಲ್ ಮೈದಾನ, ಜಯನಗರ ಮೈದಾನ ಸೇರಿ ಹಲವೆಡೆ ಕಂಡು ಬಂದಿತು.

ಪಿಒಪಿ ಬಳಕೆ: ಇನ್ನೂ ಪಿಒಪಿ ಗಣೇಶನ ಮಾರಾಟಕ್ಕೆ ನಿರಾಕರಿಸಿತ್ತಾದರೂ ಸಹ ಅನೇಕರು ನಗರಕ್ಕೆ ಪಿಒಪಿ ಗಣೇಶನನ್ನೇ ತಂದಿದ್ದರು. ಆದರೆ, ಕೆಲವು ರಟ್ಟಿನ ಮಾದರಿಯ ಗಣೇಶ ಆಗಿದ್ದರಿಂದ ಅವುಗಳನ್ನು ಪರಿಶೀಲಿಸಬೇಕಾದ ನಗರಪಾಲಿಕೆ ಅಧಿಕಾರಿಗಳು ಕೇವಲ ಜಾಗೃತಿಗಷ್ಟೇ ಸೀಮಿತವಾಗಿದ್ದರು. ಈ ಹಿನ್ನೆಲೆಯಲ್ಲಿ ನಗರದ ಅನೇಕ ಕಡೆಗಳಲ್ಲಿ ಎಂದಿನಂತೆ ಪಿಒಪಿ ಗಣೇಶಮೂರ್ತಿ ಪ್ರತಿಷ್ಠಾಪನೆ ಕಂಡು ಬಂದಿತು. ಅದರಲ್ಲೂ ಕನ್ನೇಗೌಡನಕೊಪ್ಪಲು, ಕುಂಬಾರಕೊಪ್ಪಲು, ಪಡುವಾರಹಳ್ಳಿ, ವಿಜಯನಗರ, ಹೆಬ್ಬಾಳ್, ಬೋಗಾದಿ, ಸಿದ್ಧಾರ್ಥನಗರ, ಚಾಮುಂಡಿಪುರಂ ಮೊದಲಾದ ಕಡೆಗಳಲ್ಲಿ ಬೃಹತ್ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿ ಜನ ಮನ ಸೆಳೆದರು.

### ಇಂದು ಗಜಪಡೆಗೆ ವಿಶೇಷ ಪೂಜೆ

ಪ್ರಮುಖವಾಗಿ ಮೈಸೂರಿನಲ್ಲಿ ದಸರಾ ಜಂಬೂಸವಾರಿ ಯಶಸ್ವಿಗೆ ತಾಲೀಮು ನಡೆಸುತ್ತಿರುವ ಗಜಪಡೆಯ ಎರಡು ತಂಡಗಳು ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದು, ಗಣೇಶ ಚತುರ್ಥಿಯ ಅಂಗವಾಗಿ ಅರಮನೆಯಲ್ಲಿ ಇಂದು ವಿಶೇಷಪೂಜೆ ಸಲ್ಲಿಕೆಯಾಗಲಿದೆ. ಗಜಪಡೆ 12 ಆನೆಗಳನ್ನು ಕೋಡಿಸೋಮೇಶ್ವರ ದೇವಾಲಯದ ಎದುರು ಸಾಲಾಗಿ ನಿಲ್ಲಿಸಿ ಮಹಾರಾಜರಾದಿಯಾಗಿ ಗಣ್ಯರ ಸಮ್ಮುಖದಲ್ಲಿ ವಿಶೇಷವಾಗಿ ಪೂಜೆ, ಸಿಹಿ ತಿನಿಸುವ ವಾಡಿಕೆ ಮೈಸೂರಿನಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

### ಡಿಜೆ, ಆರ್ಕೇಸ್ಟ್ರಾ ಜಟಾಪಟಿ

ನಗರ ಹಾಗೂ ಗ್ರಾಮಾಂತರ ಭಾಗದ ಕೆಲವೆಡೆ ಡಿಜೆ ಬಳಕೆಗೆ ಹಾಗೂ ರಾತ್ರಿ 9ರ ಬಳಿಕ ಆರ್ಕೇಸ್ಟ್ರಾ ನಡೆಸಲು ಅನುಮತಿಗಾಗಿ ಪೊಲೀಸ್ ಠಾಣೆಗಳ ಎದುರು ಯುವಸಮೂಹ ನೆರದಿದ್ದ ದೃಶ್ಯ ಸಹಜವಾಗಿತ್ತು. ಇಲಾಖೆ ಸೂಚನೆಯನ್ನು ಪಾಲಿಸುವಂತೆ ಪೊಲೀಸರು ಯುವಕರ ಮನವೊಲಿಸಲು ಪ್ರಯತ್ನಿಸುತ್ತಿದ್ದು, ಇದಕ್ಕಾಗಿ ಅನೇಕರು ಶಾಸಕರು ಸೇರಿ ಜನಪ್ರತಿನಿಧಿಗಳ ಮೂಲಕ ಶಿಫಾರಸ್ಸು ಮಾಡಿಸುತ್ತಿದ್ದ ದೃಶ್ಯ ಕಂಡು ಬಂದಿತು.

## ಇಡಿ ಕಾರ್ಯವೈಖರಿಗೆ ಸವಾಲು ಹಾಕಿಲ್ಲ

ಬೆಳಗಾವಿ: ಜಾರಿ ನಿರ್ದೇಶನಾಲಯ (ಇ.ಡಿ) ಒಂದು ತನಿಖಾ ಸಂಸ್ಥೆಯಾಗಿದ್ದು, ಅದರ ಕಾರ್ಯವೈಖರಿಗೆ ಸವಾಲು ಹಾಕುವ ಪ್ರಶ್ನೆಯೇ ಇಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಭಾನುವಾರ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಇ.ಡಿ ಯಾವುದೋ ಖಾಸಗಿ ವಾಹಿನಿಯಲ್ಲ. ಅದರ ಕಾರ್ಯವೈಖರಿಗೆ ಸವಾಲು ಹಾಕುವ ಪ್ರಶ್ನೆಯೇ ಬರುವುದಿಲ್ಲ. ನಮ್ಮ ಮೇಲೆ ದಾಳಿ ನಡೆದ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡುವ ಕೆಲಸ ಮಾಡಿದ್ದೇವೆ' ಎಂದು ಹೇಳಿದ್ದಾರೆ. 'ಇ.ಡಿ ಕಾರ್ಯವೈಖರಿಯನ್ನು ಪ್ರಶ್ನಿಸುವ ಯಾವುದೇ ಉದ್ದೇಶ ನಮಗಿಲ್ಲ. ಆದರೆ, ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಮಾಹಿತಿಗಳು ವಾಸ್ತವಕ್ಕೆ ದೂರವಾಗಿವೆ. ನಾವು ನೀಡುವ ಹೇಳಿಕೆಗಳನ್ನು ಯಥಾವತ್ತಾಗಿ ರಾಜ್ಯದ ಜನರಿಗೆ ತಲುಪಿಸಿದರೆ ಉತ್ತಮ. ಜನರಲ್ಲಿ ಗೊಂದಲ ಉಂಟಾಗುವ ಸಾಧ್ಯತೆಯಿದೆ' ಎಂದರು.

## ರೋಟರಿಯಿಂದ ಶಿಕ್ಷಕರಿಗೆ ಗೌರವ ಸಮರ್ಪಣೆ

ಚಾಮರಾಜನಗರ : ಸಮಾಜ ಜ್ಞಾನದ ಬೆಳಕನ್ನು ನೀಡುವ, ಉತ್ತಮ ಪ್ರಜೆಗಳನ್ನು ರೂಪಿಸುವ ಗುರುಗಳನ್ನು ರೋಟರಿ ಸಂಸ್ಥೆಯು ಗುರುತಿಸಿ ಅವರನ್ನು ಗೌರವಿಸಿ ಸತ್ಕರಿಸುವುದು ಅತ್ಯಂತ ಪವಿತ್ರವಾದ ಕೆಲಸವಾಗಿದೆ ಎಂದು ಸನ್ಮಾರ್ಗ ಸಂಸ್ಥೆ ಅಧ್ಯಕ್ಷ ಎ.ಜಿ.ಜಯರಾಮು ಹೇಳಿದರು.

ನಗರದ ರೋಟರಿ ಭವನದಲ್ಲಿ ಶಿಕ್ಷಕರ ದಿನಾಚರಣೆಯ ಅಂಗವಾಗಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು

ಬ್ರಹ್ಮ, ವಿಷ್ಣು, ಮಹೇಶ್ವರ ಅವರನ್ನು ಗುರುಗಳಿಗೆ ಹೊಲಿಸುತ್ತಾರೆ. ಯಾವುದೇ ಹುಟ್ಟಿನ ಹಿಂದೆ ಗುರುಗಳ ಪಾತ್ರ ಇದೆ. ಅದು ಹೊಸ ಚಿಂತನೆ, ವಸ್ತುವಿನ ಹುಟ್ಟು ಆಗಬಹುದು. ಹೊಸ ವ್ಯವಸ್ಥೆ ಹುಟ್ಟು ಆಗಬಹುದು. ಹುಟ್ಟಿನ ಹಿಂದೆ ಗುರು ಇರುತ್ತಾರೆ. ಅದಕ್ಕಾಗಿ ಗುರುವನ್ನು ಗುರು.ಬ್ರಹ್ಮ, ಮಹೇಶ್ವರಿ ಎಂದು ಕರೆಯುತ್ತಾರೆ ಎಂದರು. ಅಧ್ಯಕ್ಷತೆ ವಹಿಸಿದ್ದ ಅಬ್ದುಲ್‌ಅಜೀಜ್ ದೀನಾ ಮಾತನಾಡಿ, ಸಮಾಜದಲ್ಲಿ ಉತ್ತಮ ಪ್ರಜೆಗಳನ್ನು ರೂಪಿಸುವ ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು...



ಪ್ರತಿವರ್ಷದಂತೆ ಈ ವರ್ಷವು ರೋಟರಿ ಸಂಸ್ಥೆಯು ಉತ್ತಮ ಶಿಕ್ಷಕರನ್ನು ಗುರುತಿಸಿ ರೋಟರಿ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದರು.

ಪ್ರಶಸ್ತಿ ಸ್ವೀಕರಿಸಿದ ಎಂ.ಡಿ.ಮಹದೇವಯ್ಯ ಮಾತನಾಡಿ ಶಿಕ್ಷಕರ ಸೇವೆಯನ್ನು ಗುರುತಿಸಿ ರೋಟರಿ ಸಂಸ್ಥೆಯು 9 ಶಿಕ್ಷಕರಿಗೆ ರೋಟರಿ ಉತ್ತಮ ಪ್ರಶಸ್ತಿ ನೀಡಿ ಸನ್ಮಾನಿಸಿರುವುದು ತುಂಬಾ ಖುಷಿಯಾಗಿದ್ದು, ಈ ಪ್ರಶಸ್ತಿಯು ಜವಾಬ್ದಾರಿ ಹೆಚ್ಚು ಮಾಡಿದೆ ಎಂದರು.

### ರೋಟರಿ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

ಶಿಕ್ಷಕರಾದ ಎಲ್.ರವಿ, ಸೋಮಣ್ಣ, ಹೆಚ್.ವಿ.ಮಹದೇವಮ್ಮ, ಎಂ.ಡಿ.ಮಹದೇವಯ್ಯ, ಕುಮಾರ್, ಸುನೀತ, ಮಹದೇವಮ್ಮ, ಯಾಸಿನ್ ಪರ್ವಿನ್, ಮಲ್ಲಶೆಟ್ಟಿ ಅವರಿಗೆ ರೋಟರಿ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ಸಂದರ್ಭ ನಿವೃತ್ತ ಶಿಕ್ಷಕಿ ಗೀತ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥಾಪಕ ಸದಸ್ಯರಾದ ಜಿ.ಆರ್.ಅಶ್ವಥ್ ನಾರಾಯಣ್, ಸಿ.ವಿ.ಶ್ರೀನಿವಾಸಶೆಟ್ಟಿ , ಪಿಡಿಜಿ ನಾಗಾರ್ಜುನ, ಖಜಾಂಚಿ ಆರ್.ಎಂ.ಸ್ವಾಮಿಕಾರ್ಯದರ್ಶಿ ಅಂಕಶೆಟ್ಟಿ, ಎಂ. ಕಮಲ್ ರಾಜು, ಸಿ.ಎ.ನಾರಾಯಣ್ ಪದಾಧಿಕಾರಿಗಳು ಹಾಜರಿದ್ದರು

### 'ನಮ್ಮ ನಡಿಗೆ ಆರೋಗ್ಯದೆಡೆಗೆ' ಘೋಷವಾಕ್ಯದೊಂದಿಗೆ ಟ್ರೆಕ್ಕಿಂಗ್

## ಶಾರದಾ ಕಾಲೇಜಿನಿಂದ ಅಲ್ಜೈಮರ್ಸ್ ಜಾಗೃತಿ

ಮೈಸೂರು: ವಿಶ್ವ ಅಲ್ಜೈಮರ್ಸ್ ತಿಂಗಳ ಅಂಗವಾಗಿ ಅಲ್ಜೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ ಮೈಸೂರು ಶಾಖೆ, ಶಾರದಾ ವಿಲಾಸ ಕಾಲೇಜ್ ಆಫ್ ಫಾರ್ಮಸಿ ಹಾಗೂ ವಿವೇಕ ಆಸ್ಪತ್ರೆ ಸಹಯೋಗದಲ್ಲಿ ಶುಕ್ರವಾರ ಚಾಮುಂಡಿ ಬೆಟ್ಟದ ಪಾದದಿಂದ ಬೆಟ್ಟದ ಮೇಲ್ಭಾಗದವರೆಗೆ 'ನಮ್ಮ ನಡಿಗೆ ಆರೋಗ್ಯದೆಡೆಗೆ' ಎಂಬ ಘೋಷವಾಕ್ಯದೊಂದಿಗೆ ಜಾಗೃತಿ ಟ್ರೆಕ್ಕಿಂಗ್ ಕಾರ್ಯಕ್ರಮ ನಡೆಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಭಾಗವಹಿಸಿ ಮಾತನಾಡಿ, ಅಲ್ಜೈಮರ್ಸ್ ಸೇರಿ ಸ್ಮರಣಶಕ್ತಿ ಸಂಬಂಧಿತ ಕಾಯಿಲೆಗಳ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ. ಈ ಕಾಯಿಲೆಯ ಆರಂಭಿಕ ಲಕ್ಷಣಗಳ ಬಗ್ಗೆ ಅನೇಕ ಜನರಿಗೆ ತಿಳಿದಿಲ್ಲ. ಸ್ಮರಣಶಕ್ತಿ ಕುಂಠಿತವಾಗುವುದನ್ನು ಸಾಮಾನ್ಯ ವಯೋಸಹಜ ಸಮಸ್ಯೆ ಎಂದು ಭಾವಿಸಿ ನಿರ್ಲಕ್ಷಿಸುವುದರಿಂದ ಸೂಕ್ತ ಸಮಯದಲ್ಲಿ ವೈದ್ಯಕೀಯ ಸಲಹೆ ಪಡೆಯಲು ಸಾಧ್ಯವಾಗುವುದಿಲ್ಲ. ಅಲ್ಜೈಮರ್ಸ್ ಕಾಯಿಲೆಗೆ ಸಂಪೂರ್ಣ ಗುಣಪಡಿಸುವ ಚಿಕಿತ್ಸೆ ಸೀಮಿತವಾಗಿರುವುದರಿಂದ ಆರಂಭಿಕ ಹಂತದಲ್ಲೇ ಸಮಸ್ಯೆಯನ್ನು ಗುರುತಿಸುವುದು ಮುಖ್ಯ ಎಂದು ಹೇಳಿದರು.





ಎಆರ್ ಡಿಎಸ್ಐ ಮೈಸೂರು ಶಾಖೆಯ ಅಧ್ಯಕ್ಷ ಹಾಗೂ ಶಾರದಾ ವಿಲಾಸ ಕಾಲೇಜ್ ಆಫ್ ಫಾರ್ಮಸಿಯ ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿ ಮಾತನಾಡಿ, ಅಲ್ಜೈಮರ್ಸ್ ಕಾಯಿಲೆಯ ನಿರ್ವಹಣೆಯಲ್ಲಿ ಜಾಗೃತಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು. ಪ್ರಸ್ತುತ ಕೆಲವು ಔಷಧಿಗಳು ಲಭ್ಯವಿದ್ದರೂ ಅವುಗಳ ಪರಿಣಾಮ ಸೀಮಿತವಾಗಿದ್ದು, ಕೆಲವು ಔಷಧಿಗಳಿಗೆ ಅಡ್ಡಪರಿಣಾಮಗಳೂ ಇವೆ. ಹೀಗಾಗಿ ಔಷಧ ಚಿಕಿತ್ಸೆಯ ಜೊತೆಗೆ ಕಾಯಿಲೆಯ ಲಕ್ಷಣಗಳು, ಆರಂಭಿಕ ಪತ್ತೆ ಹಾಗೂ ರೋಗಿಗಳ ಆರೈಕೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಮೈಸೂರು ಕಾರ್ಯದರ್ಶಿ ಸಮೀರ್ ಕಶ್ಯಪ್, ಶಾರದಾ ವಿಲಾಸ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನ ಗೌರವ ಕಾರ್ಯದರ್ಶಿ ಆರ್.ದಿನೇಶ್, ಇನ್ನರ್ ವೀಲ್ ಅಧ್ಯಕ್ಷ ಚೈತ್ರ ಅರುಣ್, ಅರುಣ್ ಕುಮಾರ್ ಇತರರು ಭಾಗವಹಿಸಿದ್ದರು.

# "2028ಕ್ಕೆ ಮತ್ತೆ ಕಾಂಗ್ರೆಸ್ ಸರ್ಕಾರ, ಡಿ.ಕೆ. ನೇ ಮುಖ್ಯಮಂತ್ರಿ

## ಸಚಿವ ಚಲುವರಾಯಸ್ವಾಮಿ ಭವಿಷ್ಯ"



**ನಾಗಮಂಗಲ:** ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕನ್ಯಾಘಟ್ಟ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಮಹಾಗಣಪತಿ ದೇವಸ್ಥಾನದ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಜಲಸಂಪನ್ಮೂಲ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ರಾಜಕೀಯವಾಗಿ ಮಹತ್ವದ ಹೇಳಿಕೆ ನೀಡಿದ್ದಾರೆ.

ಕನ್ಯಾಘಟ್ಟ ಮಹಾಗಣಪತಿ ದೇವಸ್ಥಾನದ ಲೋಕಾರ್ಪಣೆ ವೇದಿಕೆಯಲ್ಲಿ ಮಾತನಾಡಿದ ಅವರು, "ನಮ್ಮ ಮುಂದೆ ಬರಗಾಲ ಬಂದಿದೆ. ಅತ್ಯಂತ ತೀವ್ರ ಬರಗಾಲವನ್ನು ಎದುರಿಸುತ್ತಿದ್ದೇವೆ. 2023 ರಲ್ಲಿ ಕೇಂದ್ರ ಸರ್ಕಾರ ರೈತರಿಗೆ ಕೊಡಬೇಕಾದ ಅನುದಾನವನ್ನು ಕೊಟ್ಟಿಲ್ಲ. ನಾವು ಕೋರ್ಟ್ ಮೂಲಕ ತಂದು ರೈತರಿಗೆ ಕೊಟ್ಟಿದ್ದೇವೆ" ಎಂದು ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದರು.

"ದೇವರ ಕೃಪೆಯಿಂದ ಮತ್ತೆ ನನಗೆ ಸಚಿವ ಸ್ಥಾನ ಸಿಕ್ಕಿದೆ. ನೀರಾವರಿ ವಿಚಾರದಲ್ಲಿ ಅನೇಕ ಸವಾಲುಗಳಿವೆ. ನಿಮ್ಮ ಆಶೀರ್ವಾದ ಇರಲಿ. ಚುಂಚನಗಿರಿ ಕ್ಷೇತ್ರ ಆಲದಮರದ ರೀತಿ ಬೆಳೆದಿದೆ. ಮಠವನ್ನು ನಿರ್ಮಲಾನಂದನಾಥ ಸ್ವಾಮೀಜಿ ಅವರು ಅತ್ಯುತ್ತಮವಾಗಿ ಮುನ್ನಡೆಸುತ್ತಿದ್ದಾರೆ" ಎಂದು ಹೇಳಿದರು.

ಇದೇ ವೇಳೆ ಮುಂದಿನ ರಾಜಕೀಯ ಬೆಳವಣಿಗೆ ಬಗ್ಗೆ ಮಾತನಾಡಿದ ಸಚಿವರು, "ಸಿದ್ದರಾಮಯ್ಯ ಸಹಕಾರದಿಂದ ಡಿ.ಕೆ. ಶಿವಕುಮಾರ್ ಅವರಿಗೆ ಮತ್ತೆ ಅಧಿಕಾರ ದೊರಯಲಿದೆ. ಮತ್ತೆ 2028ಕ್ಕೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತೆ. ಮತ್ತೆ ಡಿ.ಕೆ. ಶಿವಕುಮಾರ್ ರಾಜ್ಯದ ಸಿಎಂ ಆಗ್ತಾರೆ" ಎಂದು ಭವಿಷ್ಯ ನುಡಿದರು.

ಕೊನೆಯಲ್ಲಿ, "ಗೌರಿ-ಗಣೇಶ ಹಬ್ಬದಂದು ಮಳೆ ಬರಲಿ ಎಂದು ಪ್ರಾರ್ಥನೆ ಮಾಡೋಣ" ಎಂದು ಸಚಿವರು ಕರೆ ನೀಡಿದರು.

ವೇದಿಕೆಯಲ್ಲಿ ಪರಮಪೂಜ್ಯ ನಿರ್ಮಲಾನಂದನಾಥ ಸ್ವಾಮೀಜೀ,ಸಚಿವರಾದ ಬೈರತಿ ಸುರೇಶ್,ಶಾಸಕರುಗಳಾದ ಶರತ್ ಬಚ್ಚೇಗೌಡ,ಉದಯ್,ದರ್ಶನ್ ಪುಟ್ಟಣ್ಣಯ್ಯ, ಪುಟ್ಟಸ್ವಾಮಿಗೌಡ,ವಿಶ್ವಾನಾಥ್,ದಿನೇಶ್ ಗೂಳಿಗೌಡ, ಉದ್ಯಮಿ ಸ್ಟಾರ್ ಚಂದ್ರು,ವೆಂಕಟೇಶ್,ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಪ್ರಜಾ ಸೇವೆ ಆಂದೋಲನ ಜನರ ಸಮಸ್ಯೆಗಳಿಗೆ ಸೂಕ್ತ ವೇದಿಕೆ: ಶಾಸಕ ಎಂ.ಆರ್. ಮಂಜುನಾಥ್

**ಹನೂರು :** ರೈತರ ಕುಂದು ಕೊರತೆಗಳಿಗೆ ಸಾರ್ವಜನಿಕರ ಸಮಸ್ಯ ಬಗೆಹರಿಸಿಕೊಳ್ಳಲು ಪ್ರಜಾ ಸೇವೆ ಆಂದೋಲನ ವೇದಿಕೆ ಅತ್ಯಂತ ಸೂಕ್ತವಾಗಿದೆ ಎಂದು ಶಾಸಕ ಎಂ ಆರ್ ಮಂಜುನಾಥ್ ತಿಳಿಸಿದರು.

ಪಟ್ಟಣದ ಡಾ. ಬಿ ಆರ್ ಅಂಬೇಡ್ಕರ್ ಭವನದಲ್ಲಿ ಕಂದಾಯ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ಪ್ರಜಾ ಸೇವೆ ಆಂದೋಲನ ಕಾರ್ಯಕ್ರಮ ಉದ್ಘಾಟನೆ ಮಾಡಿ ನಂತರ ಅವರು ಮಾತನಾಡಿದರು.

ಹನೂರು ತಾಲೂಕು ಬರಪೀಡಿತ ಪ್ರದೇಶವಾಗಿರುವುದರಿಂದ ಜನರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ಸೇರಿದಂತೆ ಮೇವಿಗೆ ತುಂಬಾ ತೊಂದರೆ ಕಾಡುತ್ತಿದೆ. ಹಾಗಾಗಿ ಅತಿ ಶೀಘ್ರದಲ್ಲೇ ಮೇವು ಒದಗಿಸುವ ಕಾರ್ಯವನ್ನು ಅಧಿಕಾರಿಗಳು ನಡೆಸಬೇಕಾಗಿದೆ. ತುರ್ತಾಗಿ ಅಂತಹ ಕಾರ್ಯಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ ಎಂದರು.

ಸ್ಮಶಾನ ಮಂಜೂರು ಮಾಡಿ : ಸಮೀಪದ ಕಣ್ಣೂರು ಗ್ರಾಮದ ಬಸವರಾಜಪ್ಪ ಮಾತನಾಡಿ ಕಣ್ಣೂರು ಗ್ರಾಮದಲ್ಲಿ ಸಾಕಷ್ಟು ವರ್ಷಗಳಿಂದ ಸ್ಮಶಾನದ ವ್ಯವಸ್ಥೆ ಇಲ್ಲದೆ ಜನ ಪರದಾಡುತ್ತಿದ್ದಾರೆ. ಗ್ರಾಮದಲ್ಲಿರುವಂತಹ ಸರ್ಕಾರಿ ಜಮೀನು ಗುರುತಿಸಿ ಸ್ಮಶಾನ ಮಂಜೂರು ಮಾಡಿಕೊಡಬೇಕು. ಅಲ್ಲದೆ ಸ್ಮಶಾನ ಇಲ್ಲದ ಗ್ರಾಮಗಳಿಗೂ ಸಹ ಸ್ಮಶಾನ ಮಂಜೂರು ಮಾಡಿಕೊಡಲು ಅಗತ್ಯ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.



**ಮೇವು ನೀರು ಪೂರೈಕೆ ಮಾಡಿ :** ಸರ್ಕಾರ ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಿ 15 ದಿನ ಕಳೆದರೂ ಸಹ ಇನ್ನೂ ಸಹ ಮೇವು ನೀರು ಪೂರೈಕೆ ಮಾಡುವಲ್ಲಿ ಅಧಿಕಾರಿಗಳು ಮುಂದಾಗಿಲ್ಲ. ಜೊತೆಗೆ ಪಶು ಇಲಾಖೆಯ ಅಧಿಕಾರಿಗಳಿಂದ ಸರ್ಕಾರಕ್ಕೆ ತಪ್ಪು ಮಾಹಿತಿ ಹೋಗಿದೆ. ಈಗಾಗಲೇ ಮೇವು ಕೊರತೆಯಿಂದಾಗಿ ಸಾಕಷ್ಟು ನಷ್ಟ ಅನುಭವಿಸಿರುವ ರೈತರಿಗೆ ಸದ್ಯದಲ್ಲಿ ಮೇವು ಪೂರೈಕೆ ಮಾಡಬೇಕು. ಅದರಲ್ಲೂ ಗ್ರಾಮ ಪಂಚಾಯಿತಿಗೊಂದು ಗೋಶಾಲೆ ತೆರೆಯಬೇಕು. ಆ ಮೂಲಕ ಮೇವು ಮತ್ತು ನೀರನ್ನು ಜಾನುವಾರುಗಳಿಗೆ ಪೂರೈಕೆ ಮಾಡಬೇಕು ಎಂದು ಸದ್ಯದ ಮಣಿಗಾರ್ ಪ್ರಸಾದ್ ಉತ್ತಾಯ ಮಾಡಿದ್ದಾರೆ.

**ಪಿಡಿಒ ಗೆ ತರಾಟೆ :** ಮಾರ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನರೇಗಾ ಕಾಮಗಾರಿಯು ಯಂತ್ರದ ಮೂಲಕ ನಡೆಸಲಾಗುತ್ತಿದ್ದು, ಈ ವಿಷಯವನ್ನು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಅಮ್ಜದ್ ಖಾನ್ ಆರೋಪ ಮಾಡಿದರು. ತಕ್ಷಣ ಮಧ್ಯಪ್ರವೇಶ ಮಾಡಿದ ಶಾಸಕರು ಮಾರ್ಟಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚನ್ನೇಶ್ ಅವರನ್ನು ತಕ್ಷಣ ಮಾಹಿತಿ ಪಡೆದುಕೊಂಡು ದೂರು ದಾಖಲು ಮಾಡಲು ಸೂಚನೆ ನೀಡಿದರು. ನಿರ್ಲಕ್ಷ್ಯ ಮಾಡಿದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆಲಿ ಸಹ ನೀಡಿದರು.

**93 ಅರ್ಜಿ ಸ್ವೀಕಾರ :** ಕಂದಾಯ ಇಲಾಖೆಗೆ 37, ಶಿಶು ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 3,ಗ್ರಾಮೀಣಾಭಿವೃದ್ಧಿ ಪಂಚಾಯತ್ ಗೆ 21, ಶಿಕ್ಷಣ ಇಲಾಖೆ 2, ಸಾರಿಗೆ ಇಲಾಖೆ 3, ಲೋಕೋಪಯೋಗಿ ಇಲಾಖೆಗೆ 8, ಸರ್ವೇ ಇಲಾಖೆಗೆ 3, ಪಶುಪಾಲನಾ ಇಲಾಖೆಗೆ 3, ಆಹಾರ ಮತ್ತು ನಾಗರೀಕರ ಸರಬರಾಜು ಇಲಾಖೆಗೆ 4, ಅರಣ್ಯ ಇಲಾಖೆಗೆ 3, ಸಮಾಜ ಕಲ್ಯಾಣ ಇಲಾಖೆ 3, ಪೊಲೀಸ್ ಇಲಾಖೆಗೆ 2, ಚೆಸ್ಕಾಂ 1, ಪಟ್ಟಣ ಪಂಚಾಯತಿಗೆ 1 ಅರ್ಜಿ ಸೇರಿದಂತೆ ಒಟ್ಟು 93 ಅರ್ಜಿಗಳು ಸ್ವೀಕೃತವಾದವು.

ಇದೆ ಸಂದರ್ಭದಲ್ಲಿ ತಹಶೀಲ್ದಾರ್ ಚೈತ್ರ,ತಾಲೋಕು ಪಂಚಾಯಿತಿ ಇ ಒ ವೇಣು, ಹಾಗೂ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಪಾಳ್ಯ ರಾಚಪ್ಪ,ಬಿ ಇ ಒ ಪ್ರತಿಭಾ, ಸೇರಿದಂತೆ ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಜಮೀನು ವ್ಯಾಜ್ಯ ಪರಿಹಾರಕ್ಕೆ ಅಧಿಕಾರಿಗಳು ಕ್ರಮವಹಿಸಿ : ಶಾಸಕ

**ಮಂಡ್ಯ:** ಕೊತ್ತತ್ತಿ ಹೋಬಳಿಯಲ್ಲಿ ಹಲವು ವರ್ಷಗಳಿಂದ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿರುವ ರೈತ ಕುಟುಂಬಗಳ ಜಮೀನು ವ್ಯಾಜ್ಯಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು ಎಂದು ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವರು ಸೂಚಿಸಿದರು.

ಮಂಡ್ಯ ತಾಲ್ಲೂಕಿನ ಕೊತ್ತತ್ತಿ-1ನೇ ಹೋಬಳಿಯ ಕೊತ್ತತ್ತಿ ಗ್ರಾಮದ ಶ್ರೀ ವಿದ್ಯಾಗಣಪತಿ ಪ್ರೌಢಶಾಲಾ ಆವರಣದಲ್ಲಿ ಇಂದು ನಡೆದ ಪ್ರಜಾ ಸೇವೆ ಆಂದೋಲನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೊತ್ತತ್ತಿ ಹೋಬಳಿಯಲ್ಲಿ 1960ಕ್ಕೂ ಹಿಂದಿನಿಂದಲೂ ಕೆಲವು ಕುಟುಂಬಗಳು ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದು, ಕೆಲವರ ಬಳಿ ಅಗತ್ಯ ದಾಖಲೆಗಳಿವೆ. ಇನ್ನು ಕೆಲವು ಕುಟುಂಬಗಳ ಬಳಿ ದಾಖಲೆಗಳ ಕೊರತೆಯಿರುವುದರಿಂದ ಜಮೀನು ಸಂಬಂಧಿತ ವ್ಯಾಜ್ಯಗಳು ಉಂಟಾಗಿವೆ. ಈ ಹಿನ್ನೆಲೆಯಲ್ಲಿ ಕಂದಾಯ ದಾಖಲೆಗಳನ್ನು ಪರಿಶೀಲಿಸಿ, ಅರ್ಹ ರೈತ ಕುಟುಂಬಗಳಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸಬೇಕು ಎಂದರು.

ಕಂದಾಯಇಲಾಖೆಯಹಲವುದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದ್ದು, ದಾಖಲೆಗಳಲ್ಲಿ ಫಲಾನುಭವಿಗಳ ಹೆಸರುಗಳು ಲಭ್ಯವಿದ್ದಲ್ಲಿ ನಿಯಮಾನುಸಾರ ಒನ್ ಟು ಫೈಲ್ ಮಾಡಿ, ಅರ್ಹರಿಗೆ ಅಗತ್ಯ ದಾಖಲೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಮನವಿ ಮಾಡಿದರು.

ಕೊತ್ತತ್ತಿ ಹೋಬಳಿಯ ಜನರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಆಲಿಸಿ, ನಿಗದಿತ ಅವಧಿಯೊಳಗೆ ಪರಿಹರಿಸುವ ಉದ್ದೇಶದಿಂದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡಂತೆ ಪ್ರಜಾ ಸೇವೆ ಆಂದೋಲನ ಆಯೋಜಿಸಲಾಗಿದೆ. ಅರ್ಹ ಫಲಾನುಭವಿಗಳಿಗೆ ಇ-ಪೌತಿ ಖಾತೆ, ಹಕ್ಕುಪತ್ರ ಹಾಗೂ ದುರಸ್ತಿ ಪತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸರ್ಕಾರದ ವಿವಿಧ ಕಾರ್ಯಕ್ರಮಗಳು ಮತ್ತು ಇಲಾಖಾ ಕಾರ್ಯಗಳ ಒತ್ತಡ ಅಧಿಕಾರಿಗಳಿಗೆ ಇರುವುದನ್ನು ಅರ್ಥಮಾಡಿಕೊಳ್ಳುತ್ತೇವೆ. ಆದರೆ ಜಮೀನು ವಿಚಾರವು ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಜೀವನಕ್ಕೆ ನೇರವಾಗಿ ಸಂಬಂಧಿಸಿದೆ. ಹೋಬಳಿಯಲ್ಲಿ 800ಕ್ಕೂ ಹೆಚ್ಚು ಕುಟುಂಬಗಳು ಕೃಷಿಯನ್ನೇ ಅವಲಂಬಿಸಿ ಜೀವನ ನಡೆಸುತ್ತಿದ್ದು, ವ್ಯಾಜ್ಯಗಳ ಹಿನ್ನೆಲೆ ಮತ್ತು ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ ಅರ್ಹರಿಗೆ ಭೂಮಿಯ ಹಕ್ಕು ದೊರಕುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

**ಕೃಷಿಗೆ ನಿರಂತರ ವಿದ್ಯುತ್ ಪೂರೈಕೆಗೆ ಕ್ರಮ**

ರೈತರಿಗೆ ವಿದ್ಯುತ್ ಸಮಸ್ಯೆಯಾಗದಂತೆ ಕೃಷಿ ಚಟುವಟಿಕೆಗಳಿಗೆ ನಿರಂತರ ವಿದ್ಯುತ್ ಪೂರೈಕೆ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಯೋಜನೆ ರೂಪಿಸುತ್ತಿದೆ. 3,000 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದ್ದು, ಮುಂದಿನ ದಿನಗಳಲ್ಲಿ ರೈತರ ಕೃಷಿ ಕಾರ್ಯಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ, ಮಂಡ್ಯ ಉಪವಿಭಾಗಾಧಿಕಾರಿ ಶಿವಮೂರ್ತಿ ಸೇರಿದಂತೆ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.





# ಸೆ.19-20ರಂದು ರಾಜ್ಯ ಮಟ್ಟದ ಬ್ರಾಹ್ಮಣ ವಧು-ವರಾನ್ವೇಷಣ ಸಮಾವೇಶ

**ಮೈಸೂರು:** ಮೈಸೂರಿನ ಬ್ರಾಹ್ಮಣ ವಿವಿಧ ಸಂಘಟನೆಗಳು, ಮಂಗಳಸೂತ್ರ ಫೌಂಡೇಶನ್, ಸಪ್ತಪದಿ ಫೌಂಡೇಶನ್ ಟ್ರಸ್ಟ್ ಹಾಗೂ ಶ್ರೀರಾಮ ಮಂದಿರ ಸಹಕಾರದೊಂದಿಗೆ ರಾಜ್ಯ ಮಟ್ಟದ ಬ್ರಾಹ್ಮಣ ವಧು-ವರಾನ್ವೇಷಣ ಸಮಾವೇಶವನ್ನು ಸೆ.19 ಮತ್ತು 20 ಎರಡು ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ ಎಂದು ಡಾ. ರಘುರಾಂ ವಾಜಪೇಯಿ ತಿಳಿಸಿದರು

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನಗರದ ಕೃಷ್ಣಮೂರ್ತಿಪುರಂ ನ್ಯೂ ಕಾಂತರಾಜ ರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಬೆಳಗ್ಗೆ 9:00 ರಿಂದ ಸಂಜೆ 5:00 ರವರೆಗೆ ಸಮಾವೇಶ ಹಾಗೂ ಕಲ್ಯಾಣ ಪ್ರಾಪ್ತಿಗಾಗಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವವನ್ನು ಆಯೋಜಿಸಲಾಗಿದೆ ಎಂದರು

ಆಸಕ್ತ ವಧು-ವರರು 1 ಪೋಸ್ಟ್ ಕಾರ್ಡ್ ಸೈಜ್ ಫೋಟೋ, ಬಯೋಡೇಟಾ, ಜಾತಕದೊಂದಿಗೆ ಭಾಗವಹಿಸಬಹುದು.ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 8088843300 / 9449425536 - ಸಂಚಾಲಕ ಶ್ರೀನಿವಾಸ್ ಭಾರದ್ವಾಜ್ ಇವರನ್ನು ಸಂಪರ್ಕಿಸಬಹುದು ಎಂಬ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಚಾಲಕ ಶ್ರೀನಿವಾಸ್ ಎಸ್. ಭಾರದ್ವಾಜ್,ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮಾಧವರಾವ್, ಶ್ರೀನಿವಾಸ್ ಗುರೂಜಿ, ವೇಣುಗೋಪಾಲ್, ರಾಘವೇಂದ್ರ ಪ್ರಸಾದ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ದ್ವಿತಳಿ ರೇಷ್ಮೆ ಗೂಡು ಬೆಳೆದು ಹೆಚ್ಚು ಲಾಭಗಳಿಸಲು ರೈತರಿಗೆ ಎಂ.ಸಿ.ಚಂದ್ರಪ್ಪ ಕರೆ



**ರಾಮನಗರ:** ದ್ವಿತಳಿ ರೇಷ್ಮೆ ಗೂಡಿನ ದರ ಕೇಜಿಗೆ 1100/- ತಲುಪಿದೆ. ರೈತರು ಈ ಅವಕಾಶವನ್ನು ಉಪಯೋಗಿಸಿಕೊಂಡು ದ್ವಿತಳಿ ರೇಷ್ಮೆ ಗೂಡನ್ನು ಬೆಳೆದು ಹೆಚ್ಚಿನ ಲಾಭ ಪಡೆಯಬೇಕು ಎಂದು ರೇಷ್ಮೆ ಇಲಾಖೆ ಉಪನಿರ್ದೇಶಕ ಎಂ.ಸಿ.ಚಂದ್ರಪ್ಪ ಕರೆ ನೀಡಿದರು.

ನಗರದ ರೇ ಕೃಷಿ ಉಪ ನಿರ್ದೇಶಕರ ಕಚೇರಿಯಲ್ಲಿ ನಡೆದ "ನನ್ನ ರೇಷ್ಮೆ ನನ್ನ ಅಭಿಯಾನ" ಕಾರ್ಯಕ್ರಮ ಉದ್ಘಾಟಿಸಿದ ಅವರು ಮಾತನಾಡಿದರು.

**ಹೊಸ ತಳಿಗಳು ಮತ್ತು ತಾಂತ್ರಿಕತೆ ಬಳಸಿಕೊಳ್ಳಿ**

ರೇಷ್ಮೆ ಕೃಷಿಯಲ್ಲಿ ಬೆಳೆಗಾರರು ಸಾಂಪ್ರದಾಯಿಕ ಪದ್ಧತಿಗಳನ್ನು ಅನುಸರಿಸುವುದನ್ನು ಕೈಬಿಡಬೇಕು. ಹೊಸ ಹಿಪ್ಪುನೇರಳೆ ತಳಿಗಳು , ಹೊಸ ದ್ವಿತಳಿ ಸಂಕರಣ ರೇಷ್ಮೆ ಹುಳುವಿನ ತಳಿಗಳು ಹಾಗೂ ನೂತನ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ರೇಷ್ಮೆ ಗೂಡಿನ ಉತ್ಪಾದನಾ ವೆಚ್ಚ ಕಡಿಮ ಮಾಡಿಕೊಳ್ಳುವುದರ ಮುಖಾಂತರ ರೇಷ್ಮೆ ಕೃಷಿಯಲ್ಲಿ ಹೆಚ್ಚಿನ ಲಾಭ ಗಳಿಸಬೇಕೆಂದು ಚಂದ್ರಪ್ಪ ತಿಳಿಸಿದರು.

ಕೇಂದ್ರ ರೇಷ್ಮೆ ಮಂಡಳಿ ವಿಜ್ಞಾನಿ ಡಾ.ಶಿವಕುಮಾರ್ , ರೈತರಿಗೆ ಹಿಪ್ಪುನೇರಳೆ ರೋಗಗಳು ಮತ್ತು ಕೀಟ ಬಾದೆಯನ್ನು ಹಾಗೂ ಸಮಗ್ರ ಕೀಟ ನಿಯಂತ್ರಣ ಪದ್ಧತಿಗಳ ಅಳವಡಿಕೆ ಬಗ್ಗೆ ಸಮಗ್ರವಾಗಿ ವಿವರಿಸಿದರು.

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ವಿಜ್ಞಾನಿ ಡಾ.ಮಧುಸೂದನ್ ಮಾತನಾಡಿ, ಸಂಸ್ಥೆಯಿಂದ ಹೊರ ತಂದಿರುವ ಹೊಸ ಹಿಪ್ಪುನೇರಳೆ ತಳಿ ಎಜಿಬಿ-8ಮತ್ತು ಹೊಸ ರೇಷ್ಮೆ ಹುಳುವಿನ ತಳಿಗಳಾದ ಟಿಟಿ21 ಮತ್ತು ಟಿಟಿ56, ಬಿಎಫ್‌ಸಿ1ಬಿಎಫ್‌ಸಿ10ತಳಿಗಳ ಬಗ್ಗೆ ಮಾಹಿತಿ ಕೊಟ್ಟರು.

ಚನ್ನಪಟ್ಟಣ ರೇಷ್ಮೆ ತರಬೇತಿ ಸಂಸ್ಥೆ ಸಹಾಯಕ ನಿರ್ದೇಶಕ ಮುತ್ತುರಾಜ್ ರವರು , ಹಿಪ್ಪುನೇರಳ ತೋಟದ ಮಣ್ಣು ಪರೀಕ್ಷೆ ಮತ್ತು ಹಿಪ್ಪುನೇರಳೆ ವ್ಯವಸಾಯದ ತಾಂತ್ರಿಕತೆಗಳ ಬಗ್ಗೆ ರೇಷ್ಮೆ ಬೆಳೆಗಾರರಿಗೆ ಮಾಹಿತಿ ನೀಡಿದರು.

ರೇಷ್ಮೆ ಬೆಳೆಗಾರರ ಹಿತ ರಕ್ಷಣಾ ವೇದಿಕೆ ಕಾರ್ಯದರ್ಶಿ ರವಿ ಮಾತನಾಡಿ, ರೇಷ್ಮೆ ಬೆಳೆಗಾರರಿಗೆ ನೀಡುವ ಹುಳು ಸಾಕುವ ಮನೆ ಮತ್ತು ಸಲಕರಣೆಗಳ ಸಹಾಯಧನ ಹೆಚ್ಚಿಸಬೇಕು. ರೈತರು ಯಾಂತ್ರೀಕರಣಕ್ಕಾಗಿ ಇಲಾಖೆಯಿಂದ ಮಿನಿಟ್ರಾಕ್ಟರ್, ಟಿಲ್ಲರ್ ಟ್ರಾಕ್ಟರ್‌ಗಳನ್ನು ಸಬ್ಸಿಡಿ ದರದಲ್ಲಿ ನೀಡಬೇಕು. ಎಲ್ಲಾ ರೇಷ್ಮೆ ಬೆಳೆಗಾರರಿಗೆ ಸಕಾಲದಲ್ಲಿ ವ?ಪೂರ್ತಿ ಸೋಂಕು ನಿವಾರಕಗಳನ್ನು ಇಲಾಖೆಯಿಂದಲೇ ಸಕಾಲದಲ್ಲಿ ವಿತರಿಸಬೇಕೆಂದು ತಿಳಿಸಿದರು.

ರೇಷ್ಮೆ ಮೊಟ್ಟೆ ಉತ್ಪಾದನಾ ಕೇಂದ್ರದ ವಿಜ್ಞಾನಿ ಡಾ.ರಾಧ ಮತ್ತು ಚನ್ನಪಟ್ಟಣ ರೇಷ್ಮೆ ತರಬೇತಿ ಸಂಸ್ಥೆ ಉಪನಿರ್ದೇಶಕ ಕೆ.ಜಿ.ಚಂದ್ರಿಕಾರವರು ರೈತರ ತಾಂತ್ರಿಕ ಸಮಸ್ಯೆಗಳಿಗೆ ಉತ್ತರಿಸಿದರು. ಪ್ರಶಾಂತ್ ರವರು ಊಜಿ ನೊಣವನ್ನು ಜೈವಿಕ ಪದ್ಧತಿಯಲ್ಲಿ ನಿಯಂತ್ರಿಸುವ ಹಾಗೂ ಹಿಪ್ಪುನೇರಳೆ ತೋಟಗಳಲ್ಲಿ ಎಲೆಸುರುಳಿ ಕೀಟದ ನಿಯಂತ್ರಣದ ಬಗ್ಗೆ ಪ್ರಾತ್ಯಕ್ಷತೆ ಮುಖಾಂತರ ರೈತರಿಗೆ ತಿಳಿಸಿಕೊಟ್ಟರು.

ರೇಷ್ಮೆ ಬೆಳೆಗಾರರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಗೌತಮ್ ಗೌಡ, ರೇಷ್ಮೆ ವಿಸ್ತರಣಾಧಿಕಾರಿಗಳಾದ ಪವನ್ , ಪರಮೇಶ್ , ಮಾಯಗಾನಹಳ್ಳಿ ಮತ್ತು ಬನ್ನಿಕುಪ್ಪೆ ತಾಂತ್ರಿಕ ಸೇವಾ ಕೇಂದ್ರ ರೇಷ್ಮೆ ನಿರೀಕ್ಷಕ ಕೆ.ಆರ್.ಭಾಸ್ಕರ್ ಮತ್ತಿತರರು ಉಪಸ್ಥಿತರಿದ್ದರು.

# ಬುದ್ಧರ ತತ್ವ ಅಳವಡಿಸಿಕೊಂಡರೆ ಜೀವನ ಸಾರ್ಥಕ

## ದಮ್ಮ ಪಯಣಕ್ಕೆ ಗುಂಡ್ಲುಪೇಟೆಯಲ್ಲಿ ವಕೀಲರ ಸಂಘದಿಂದ ಆತ್ಮೀಯ ಸ್ವಾಗತ



**ಗುಂಡ್ಲುಪೇಟೆ:** ಭಗವಾನ್ ಬುದ್ಧರ ತತ್ವ, ಸಿದ್ಧಾಂತ ಹಾಗೂ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಬದುಕು ಸಾರ್ಥಕವಾಗುತ್ತದೆ ಎಂದು ವಕೀಲರ ಸಂಘದ ಸರ್ವ ಸದಸ್ಯರು ಅಭಿಪ್ರಾಯಪಟ್ಟರು.

ಚಾಮರಾಜನಗರದಲ್ಲಿ ಇದೇ ತಿಂಗಳ 24 ಮತ್ತು 25ರಂದು ನಡೆಯಲಿರುವ ಅಂತರಾಷ್ಟ್ರೀಯ ಬೌದ್ಧ ಸಮ್ಮೇಳನ?2026ರ ಅಂಗವಾಗಿ ಸಾಗುತ್ತಿರುವ ದಮ್ಮ ಪಯಣ ಯಾತ್ರೆಗೆ ಗುಂಡ್ಲುಪೇಟೆಯಲ್ಲಿ ಆತ್ಮೀಯ ಸ್ವಾಗತ ನೀಡಲಾಯಿತು. ಗುಂಡ್ಲುಪೇಟೆ ನ್ಯಾಯಾಲಯದ ಮುಂಭಾಗದಲ್ಲಿ ವಕೀಲರ ಸಂಘದ ವತಿಯಿಂದ ದಮ್ಮ ಪಯಣ ಯಾತ್ರೆಯನ್ನು ಬರಮಾಡಿಕೊಂಡು, ತಾಲೂಕಿನ ಸಮಸ್ತ ಜನತೆಯ ಪರವಾಗಿ ಯಾತ್ರಿಕರಿಗೆ ಶುಭ ಹಾರೈಸಲಾಯಿತು.

ಭಗವಾನ್ ಬುದ್ಧರು ಮನುಷ್ಯನ ದುಃಖ, ಕಷ್ಟ ಹಾಗೂ ಸಂಕಷ್ಟಗಳಿಂದ ಮುಕ್ತಿಯ ಮಾರ್ಗವನ್ನು ತೋರಿಸಿಕೊಟ್ಟ ಮಹಾನ್ ಚಿಂತಕರಾಗಿದ್ದಾರೆ. ಸಾವಿರಾರು ವರ್ಷಗಳು ಕಳೆದರೂ ಶಾಂತಿ, ಸಮಾನತೆ, ಸಹೋದರತ್ವ ಹಾಗೂ ಮಾನವೀಯತೆಯ ಕುರಿತು ಬುದ್ಧರು ಸಾರಿದ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ.

ಬುದ್ಧರ ತತ್ವಗಳನ್ನು ಅಳವಡಿಸಿಕೊಂಡಿರುವ ಹಲವು ದೇಶಗಳು ಪ್ರಗತಿಯತ್ತ ಸಾಗುತ್ತಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು.

ಚಾಮರಾಜನಗರದ ಬಿಕ್ಕು ಸಂಘ ಹಾಗೂ ಭಾರತೀಯ ಬೌದ್ಧ ಮಹಾಸಭಾ ವತಿಯಿಂದ ಆಯೋಜಿಸಿರುವ ಅಂತರಾಷ್ಟ್ರೀಯ ಬೌದ್ಧ ಸಮ್ಮೇಳನದ ಹಿನ್ನೆಲೆಯಲ್ಲಿ ಸಾಗುತ್ತಿರುವ ದಮ್ಮ ಪಯಣವು ಬುದ್ಧರ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಮಹತ್ವದ ಯಾತ್ರೆಯಾಗಿದೆ ಎಂದು ತಿಳಿಸಲಾಯಿತು.

ಈ ಸಂದರ್ಭದಲ್ಲಿ ವಕೀಲರಾದ ಮಾದು ಸಿ.ಜಿ. ಕಾಂತರಾಜ್, ಜವರಾಜು, ಎಂ. ಬೀರೇಗೌಡ, ಯೋಗೇಶ್ ಕುಮಾರ್, ಶಿವಕುಮಾರ್, ಎಚ್.ಪಿ. ಮೂರ್ತಿ, ಸಿದ್ದೇಶ್, ಟಿ.ಎಸ್. ವೆಂಕಟೇಶ್, ಬಿ.ಪಿ. ಪುಟ್ಟಸ್ವಾಮಿ, ರಾಜೇಶ್ ಹಂಗಳ, ಚೇತನ್, ಕೆಂಪರಾಜು, ಚಿಕ್ಕನಂಜಯ, ರಾಜೇಶ್ ಗುಂಡ್ಲುಪೇಟೆ, ಅರವಿಂದ್ ಕುಮಾರ್, ಪ್ರಸಾದ್ ಹಸಗೂಲಿ, ರವಿ ಉಪ್ಪಾರ್ ತೊಂಡವಾಡಿ, ಸುಭಾಷ್ ಮಾಡ್ರಳ್ಳಿ, ಶ್ರೀನಿವಾಸ್ ಪ್ರಸಾದ್, ಸೌಮ್ಯ, ವಿನುತಾ, ಭಾಗ್ಯ, ನೀಲಾಂಬರಿ, ರವಿ ಕೆಬ್ಬೆಪುರ, ಮಹದೇವಸ್ವಾಮಿ ಸೇರಿದಂತೆ ಇನ್ನಿತರ ವಕೀಲರು ಹಾಗೂ ದಮ್ಮಯಾತ್ರೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಭಯದ ಕೊನೆ : ಸಾವಿನ ಭಯವನ್ನೇ ಗೆಲ್ಲಿ



ಸಾವು ಎಂಬ ಉಚ್ಚಾರಣೆಯೇ ಹೃದಯಕುಹರದಲ್ಲಿ ವಿದ್ಯುತ್ ಸಂಚಾರ ಹುಟ್ಟಿಸುತ್ತದೆ. ಈ ಆತಂಕದ ಕತ್ತಲೆಯೇ ಜೀವನದ ಪ್ರಭೆಯನ್ನು ನುಂಗುವ ಅದೃಶ್ಯ ಹಸ್ತ. ಅರುಣೋದಯದ ಮೌನದಲ್ಲಿ ಉಸಿರಾಟದ ಏರಿಳಿತವನ್ನು ಸಾಕ್ಷೀಭಾವದಿಂದ ಆಲಿಸಿದರೆ, ಒಳಗಿನ ಪ್ರಕ್ಷುಬ್ಧತೆ ಸಮುದ್ರದಂತೆ ಸ್ಥಿಮಿತಗೊಳ್ಳುತ್ತದೆ. ಅಸ್ತಿತ್ವದ ಅಂತ್ಯ ಎಂಬ ಆಲೋಚನೆ ಮೂಡಿದಾಗ, ಅದನ್ನು ಆಕಾಶದಲ್ಲಿ ತೇಲುವ ಕಾರ್ಮೋಡ ಎಂದು ಭಾವಿಸಿ ಮುಗುಳ್ನಕ್ಕರೆ, ಭೀತಿಯ ಅಂಕುಶ ಕಳಚಿ ಬೀಳುತ್ತದೆ.

ಭೀತಿಯನ್ನು ಮೀರಿದ ವ್ಯಕ್ತಿ ಲೋಕಕ್ಕೆ ದೀಪಸ್ತಂಭವಾಗುತ್ತಾನೆ. ವಿದ್ಯಾಲಯದ ಅಂಗಳದಲ್ಲಿ ಜನನ-ಮರಣಗಳ ತಾತ್ವಿಕ ಚರ್ಚೆ ಮುಕ್ತವಾಗಿ ನಡೆದರೆ, ಕಿಶೋರ ಮನಸ್ಸಿನಲ್ಲಿರುವ ಅಭದ್ರತೆಯ ಹಿಮಪದರ ಕರಗುತ್ತದೆ. ಕೊನೆಯ ಉಸಿರಿನ ಯಾತನೆಯಲ್ಲಿರುವವರ ದಿನಗಳನ್ನು ಉತ್ಸವವಾಗಿಸುವ ಹೃದಯಗಳು ಗ್ರಾಮಕ್ಕೊಂದಿದ್ದರೆ, ಮನುಷ್ಯತ್ವಕ್ಕೆ ದಿವ್ಯತೆ ಪ್ರಾಪ್ತವಾಗುತ್ತದೆ. ನನ್ನ ದೃಷ್ಟಿ ಪರರ ಬಾಳಿಗೆ ದಾರಿದೀಪವಾಗಲಿ ಎಂಬ ನೇತ್ರದಾನದ ಪ್ರತಿಜ್ಞೆ ಯುವಚೇತನದಲ್ಲಿ ಚಿಗುರಿದರೆ, ಸ್ವಕೇಂದ್ರಿತ ಬೇಲಿ ಧರೆಗುರುಳುತ್ತದೆ.

ಅಂತರಂಗದ ಅಂಗಳವನ್ನು ಹದಗೊಳಿಸುವ ಕಲೆ ಹೀಗಿದೆ. ಪ್ರಭಾತದ ದಿನಚರಿಯಲ್ಲಿ ಮೂರು ಆನಂದದ ಮುತ್ತುಗಳನ್ನು ಪೋಣಿಸಿ. ಸಂಧ್ಯಾಕಾಲದಲ್ಲಿ ದೀರ್ಘ ಪೂರಕ-ರೇಚಕಗಳಿಂದ ಮನದ ಧೂಳನ್ನು ಗುಡಿಸಿ.ವಾರಕ್ಕೊಮ್ಮೆ ತಂತ್ರಜ್ಞಾನದ ಕೋಲಾಹಲದಿಂದ ವಿರಮಿಸಿ, ನಿಶ್ಯಬ್ದದ ತೊಟ್ಟಿಲಲ್ಲಿ ಲೀನರಾಗಿ. ಮಾಸಕ್ಕೊಮ್ಮೆ ಸ್ಮಶಾನದ ನಿಶ್ಯಬ್ದತೆಯೆದುರು ನಿಂತು ಕ್ಷಣಭಂಗುರತೆಯನ್ನು ಅರಿತು, ಉಳಿದ ಜೀವಿತವನ್ನು ಪ್ರೀತಿಸಲು ಕಲಿಯಿರಿ.

ಆತಂಕದ ಬೇರು ಕತ್ತರಿಸಿದಾಗ ಜೀವನವೇ ಜಾತ್ರೆಯಾಗುತ್ತದೆ. ಮರಣದ ಛಾಯೆಯನ್ನು ದಾಟಿ ನಿಂತವನಿಗೆ ಪ್ರತಿ ಶ್ವಾಸವೂ ಸಂಭ್ರಮ. ಭಯಮುಕ್ತ ಚಿತ್ತವೇ ಮೃತ್ಯುಂಜಯ ಮಹಾಚಿತ್ತ. ಹಂಚಿದ ಸಂಕಟ ಅರ್ಧವಾಗುತ್ತದೆ, ಬಚ್ಚಿಟ್ಟ ದುಗುಡ ದ್ವಿಗುಣವಾಗುತ್ತದೆ.

ಅಂಕಣ 21

**ಸಾವು ಸಂಕಟಪಡುವ ಸಂಗತಿಗಳು..!**



|ಡಾ.ಸುಧಾಕರ.ಜಿ.ಲಕ್ಕವಳ್ಳಿ








## ಕರ್ನಾಟಕದ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ



**ಡಾ. ಜಿ. ಪರಮೇಶ್ವರ**
ಮಾನ್ಯ ಉಪ ಮುಖ್ಯಮಂತ್ರಿಗಳು

**ಶ್ರೀ ಡಿ.ಕೆ. ಶಿವಕುಮಾರ್**
ಸನ್ಮಾನ್ಯ ಮುಖ್ಯಮಂತ್ರಿಗಳು

**15ನೇ ಸೆಪ್ಟೆಂಬರ್ 2026**
**ಸಮಯ: ಬೆಳಿಗ್ಗೆ 10.00 ಗಂಟೆ**
**ಸ್ಥಳ: ಬ್ಯಾಂಕ್ವೆಟ್‌ಹಾಲ್, ವಿಧಾನಸೌಧ, ಬೆಂಗಳೂರು.**

## ಯುವಜನರ ಧ್ವನಿಗೆ ಶಕ್ತಿ ತುಂಬಿ, ಪ್ರಜಾಪ್ರಭುತ್ವವನ್ನು ಬಲಪಡಿಸೋಣ.

“ಪ್ರಜಾಪ್ರಭುತ್ವ ಎಂದರೆ ಕೇವಲ ಒಂದು ಸರ್ಕಾರಿ ವ್ಯವಸ್ಥೆಯಲ್ಲ. ಅದು ಮೂಲಭೂತವಾಗಿ ಒಟ್ಟಿಗೆ ಬಾಳುವ ಒಂದು ವಿಧಾನ ಮತ್ತು ಗೌರವಾನ್ವಿತ ಅನುಭವಗಳ ಸಂವಹನವಾಗಿದೆ.”

– ಡಾ. ಬಿ.ಆರ್. ಅಂಬೇಡ್ಕರ್



ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಶ್ರೀ **ಕೆ.ಹೆಚ್.ಮುನಿಯಪ್ಪ** ಅವರು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ **ಡಿ.ಕೆ.ಶಿವಕುಮಾರ್** ಅವರನ್ನು ಅಭಿನಂದಿಸುತ್ತಿರುವುದು.

**``ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು”**
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಕರ್ನಾಟಕ ವಾರ್ತೆ

**Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,**